ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 36.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 9, ಸ್ರ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ಇನಾಂ ಸೂಪರ್ಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಲೆಕ್ಟೋರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ರು, ರಿಜಿಸ್ಟ್ರೇರ್ಸ ವ ಎಡ್ಯುಕೇರ್ಸ ಇನ್‌ಸ್ಪೆಕ್ಟರ್ ಜನರಲ್‌ರವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜ್‌ರು, ಡಿಸ್ಟ್ರಿಕ್ಟ ಡೆಪ್ಯೂಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು ಫಾರೆಸ್ಟ್ ಆಫೀಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇರ್ಷಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 26ನೆ ಆಗಸ್ಟು 1909.

ನಂ. 1949—ಸ್ಯಾನಿಟೆರಿ 4—09—15, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇರ್ಷ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ವತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ನಂಜದೇವನಪುರ	ಚಾಮರಾಜನಗರ.
ಅರಳಿಕಟ್ಟೆ	ಡಿಟೋ

ತಾರೀಖು 26ನೆ ಆಗಸ್ಟು 1909.

ನಂ. 1951—ಸ್ಯಾನಿಟೆರಿ. 4—09—16, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಮಲ್ಲಯ್ಯನಪುರ	ಚಾಮರಾಜನಗರ
ಹೊಸೂರು	ಗುಂಡ್ಲುಪೇಟೆ.

ತಾರೀಖು 4ನೆ ಸೆಪ್ಟಂಬರ್ 1909.

ನಂ. 2203—ಸ್ಯಾನಿಟೆರಿ 4-09-18, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ				ತಾಲ್ಲೂಕು.
ಪಂಜನೆಹಳ್ಳಿ	...	...	...	ಗುಂಡ್ಲು ಪೇಟೆ.
ರಾಮಪುರ	...	...	...	ನಂಜನಗೂಡು.
ನಂಜನಗೂಡು	...	...	...	ಡಿಟೋ
ಮರಿಯಾಲ	...	...	...	ಚಾಮರಾಜನಗರ.
ಫೈಂಬ್‌ರಾಕ್ಸ್	...	...	...	ಫೈಂಬ್‌ರಾಕ್ಸ್ ಸಬ್ ತಾ||
ಮೂಗೂರು	...	...	...	ಟಿ. ನರಸೀಪುರ.
ಗಾಜನೂರು	...	...	...	ಮಳವಳ್ಳಿ.
ಚೌಡನಹಳ್ಳಿ	...	...	...	ಹುಣಸೂರು.
ಚಲ್ಲಹಳ್ಳಿ	...	...	...	ಡಿಟೋ

ತಾರೀಖು 8ನೆ ಸೆಪ್ಟಂಬರ್ 1909.

ನಂ. 2309—ಸ್ಯಾನಿಟೆರಿ 14-09-9, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಶ್ರೀವೆಂಕಟರಮಣ ಸ್ವಾಮಿ ಬ್ರಹ್ಮೋತ್ಸವ.	ತಿರುಮಲೆ	...	ಉತ್ತರ ಆರ್ಕಾಟು.	12—9—09	26—9—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಸೆಪ್ಟಂಬರ್ 2ನೆ ಮಂಗಳವಾರದ 669ನೆ ಮೆಮೊ ಪ್ರಕಾರ.
ತುಲಾ ಕಾವೇರಿ ಉತ್ಸವ.	ಮಾಯವರಂ	...	ತಂಜಾವೂರು	10—10—09	15—11—09	ಡಿಟೋ ನಂಬರ್ 671.

ತಾರೀಖು 31ನೆ ಆಗಸ್ಟು 1909.

ನಂ. ಜು. 649—ಕೋರ್ಟ್ಸ್ 40-09-4, ಸ್ರ 1901ನೆ ಇಸವಿ ಆಗಸ್ಟು 13ನೆ ವರು ಂ ಜು. 467ನೆ ನಂಬರ್ ಸರ್ಕಾರೀ ಇಸ್ತಿಹಾರ್ನಾಮೆಯಲ್ಲಿ ಮದ್ದಗಿರಿ ಮುನಿಸಿಫ್ ಮಿ|| ಎ. ಕೆ. ಶ್ರೀನಿವಾಸರಾಘವಾಚಾರ್, ಬಿ.ಎ.,ಬಿ.ಎಲ್. ರವರಿಗೆ ಪೂರಾ ತಲಬಿನ ಮೇಲೆ ಕೊಟ್ಟ ಪ್ರಿವಿಲೇಜ್ ರಜಾನಿನ ಜತೆಗೆ 21 ದಿವಸಗಳ ರಜವನ್ನು ಹೆಚ್ಚಾಗಿ ಕೊಟ್ಟಿದೆ.

ತಾರೀಖು 1ನೆ ಸೆಪ್ಟಂಬರ್ 1909.

ನಂ. ಜು. 667—ರೆಜಿಸ್ಟ್ರೇಷನ್ 3-09-5, ಸರ್ಕಾರಿ ಕೆಲಸದ ಅನುಕೂಲಕ್ಕೋಸ್ಕರ ಇದರಡಿ ಕಂಡ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿಗಳನ್ನು ಮಂಜೂರ್ಮಾಡಿರುತ್ತದೆ :—

1.	ಟಿ. ಬಿ.ವೆಂಕಟ್ಟಾಚಾರ್	...	ಚಿತ್ರದುರ್ಗದಿಂದ	... ಶಿವಮೊಗ್ಗಾಕ್ಕೆ.
2.	ಸುಬ್ಬರಾವ್ ಬಾಪಟ್, ವಿ.	...	ಶಿವಮೊಗ್ಗಾದಿಂದ	... ಯಡತೊರೆಗೆ.
3.	ಕೆ. ದೊರೆಸ್ವಾಮ್ಯಯ್ಯಂಗಾರ್	...	ಯಡತೊರೆಯಿಂದ	... ಚಿತ್ರದುರ್ಗಕ್ಕೆ.

ತಾರೀಖು 28ನೆ ಆಗಸ್ಟ್ 1909.

ನಂ. 2079—Ml. 399-08-27, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷ್ಷ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನು ಮತ್ತು ಕಟ್ಟಡ ಸರ್ಕಾರಿ ಕೆಲಸಕ್ಕೆ, ಎಂದರೆ, ನಂಜನಗೂಡು ಟವ್ನ 10ನೆ ನಂಬರ್ ಕ್ಲಸರವನ್ನು ರಸ್ತೆ ಬಡಾವಣೆಗೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜ಼ನ್ ಜಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಯಾ ಮಾಲೀಕರ ಹೆಸರು.	ಖಾತೆ ನಂಬರ್.	ಖಾನೇಷುಮಾರಿ ನಂಬರ್.	ಖಾಲಿ ನಿವೇಶನ ಮತ್ತು ಹೆಂಚಿನಮನೆ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.			ಚತುರ್ಗಡಿ.			
								ಪೂರ್ವ ಪಶ್ಚಿಮ ಅಡಿ.	ದಕ್ಷಿಣ ಉತ್ತರ ಅಡಿ.	ಚದರ ಅಡಿ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಂಜನಗೂಡು	ಕಸಬಾ	ನಂಜನಗೂಡು	(1) ಗಣಗನೂರು ಶ್ರೀಕಂಠಯ್ಯ ಅನುಭವದಾರ್ ಜಮಾದಾರ್ ದಾಸಪ್ಪನವರು.	318	425	ಹೆಂಚು ಅಂಕಣ 3 ಖಾಲೀಜಾಗ ...	27 28	5 5	15 15½	ನಂಜುಂಡಯ್ಯನವರ ಮನೆ ಹತ್ತಲುಸಹ	ಸರ್ಕಾರಿ ರಸ್ತೆ ಮತ್ತು ಖಾಲಿ ಜಾಗ	ಶ್ರೀಕಂಠಯ್ಯನವರ ಮನೆ ಖಾಲಿ ಜಾಗ ಸಹ	ಹೆಡ್‌ಮ್ಯಾಸ್ಟರ್ ವೆಂಕಟರಮಣಯ್ಯನವರ ಮನೆ
				(2) ಹೆ. ಮಾ. ರು. ವೆಂಕಟರಮಣಯ್ಯನವರು.	319	426	ಡಿಟೋ ... ಹೆಂಚು ಅಂಕಣ 3 ಖಾಲಿ ಜಾಗ ...	15 27 9	5+3/2 5 5	7 15 5	ನಂಜಮ್ಮನವರ ಮನೆ ಖಾಲಿಜಾಗಸಹ	ಡಿಟೋ	ಡಿಟೋ	ವೆಂಕಟರಮಣಯ್ಯನವರ ಮನೆ
				(3) ಅಮ್ಮನವರಗುಡಿ ಯಜ್ಞಭಟ್ಟರ ನಂಜಮ್ಮ.	321	427	ಡಿಟೋ ...	21	5	12	ಸುಬ್ರಹ್ಮಣ್ಯಸೋಮಯಾಜಿಗಳ ಮನೆ ಖಾಲಿಜಾಗ	ವೆಂಕಟ್ರಮಣಯ್ಯನವರ ಮನೆ	ಡಿಟೋ	ನಂಜಮ್ಮನವರ ಮನೆ ಖಾಲಿ ಜಾಗ ಸಹ
				(4) ವೈದ್ಯ ನಂಜುಂಡಯ್ಯನ ಮನೆ (ಡಿ. ಮು. ಸುಬ್ಬಣ್ಣ).	400	533	ಡಿಟೋ ...	40	5	22	ಗೊಲ್ಲೇರ ರಾಮಾವಧಾನಿ ಮನೆ	ಶ್ರೀಕಂಠಯ್ಯನವರ ಮನೆ	ನಂಜುಂಡಯ್ಯನವರ ಮನೆ ಖಾಲಿಜಾಗ	ಸುಬ್ರಂಹಣ್ಯ ಸೋಮಯಾಜಿಗಳ ಮನೆ
				(5) ಸುಬ್ರಹ್ಮಣ್ಯ ಸೋಮಯಾಜಿಗಳು (ನಾಗಪ್ಪಶಾಸ್ತ್ರಿ).	292	128	ಡಿಟೋ ...	38	5	21	ಕೃಷ್ಣಭಟ್ಟರ ಮನೆ ಖಾಲಿಜಾಗ ಸಹ	ನಂಜಮ್ಮನವರ ಮನೆ ಖಾಲಿ ಜಾಗ ಸಹ	ನಂಜುಂಡಯ್ಯನವರ ಮನೆ ಖಾಲಿ ಜಾಗ ಸಹ	ಸುಬ್ರಂಹಣ್ಯ ಸೋಮಯಾಜಿಗಳ ಮನೆ ಖಾಲಿಜಾಗಸಹ
				(6) ನರಸುಬ್ಬ ದೀಕ್ಷಿತರ ಮನೆ ಗೊಲ್ಲೆ ರಾಮಾವಧಾನಿ ಮಗ.	399	534	ಡಿಟೋ ...	40	5	22	ವೆಂಕಟೇಶಉಪಾಧ್ಯಾಯರ ಮನೆ ಖಾಲಿ ಜಾಗ	ವೈದ್ಯ ನಂಜುಂಡಯ್ಯನವರ ಮನೆ ಖಾಲಿ ಜಾಗ	ರಾಮಾವಧಾನಿಗಳ ಮನೆ ಖಾಲಿಜಾಗ ಸಹ	ಕೃಷ್ಣಭಟ್ಟರ ಮನೆ ಖಾಲಿ ಜಾಗ ಸಹ
				(7) ಸುಬ್ಬಾ ಉಪಾಧ್ಯರು ಅನುಭವದಾರ್ ವೆಂಕಟರಾಮ ಉಪಾಧ್ಯರು, ವೆಂಕಟೇಶ ಉಪಾಧ್ಯರು.	397	535	ಡಿಟೋ ...	40	5	22	ವೆಂಕಟನಾರ್ಣಪ್ಪನವರ ಮನೆ ಖಾಲಿಜಾಗ ಸಹ	ನರಸಿಂಹ ದೀಕ್ಷಿತರ ಮನೆ ಖಾಲಿ ಜಾಗ ಸಹ	ಸುಬ್ಬಾಉಪಾಧ್ಯರ ಮನೆ ಖಾಲಿ ಜಾಗ ಸಹ	ನರಸಮ್ಮನವರ ಮನೆ ಖಾಲಿ ಜಾಗ ಸಹ

ಸಂಖ್ಯೆ.	ಜಾತೇದಾರರ ಯಾ ನಮೂನೀಕರ ಹೆಸರು.	ಜಾಲಿ ಸಂಖ್ಯೆ.	ಜಾಲಿ ನಿಲ್ಲುವ ಸ್ಥಳ ಹೆಂಚಿನವುಗಳ.	ಈಗ ಸರ್ಕಾರಕ್ಕೆ ಬೇಕಾಗಿರುವ ಮನೆಗಳ ಲೆಕ್ಕ. ಪೂರ್ವ ಪಶ್ಚಿಮ ಉದ್ದ	ದಕ್ಷಿಣ ಉತ್ತರ ಅಡಿ.	ಇತರ ಅಂತರ.	ಚತುರ್ದಿಕ್ಕು. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
	(8) ತಿಪಟೂರ ಮಗ ಕೃಷ್ಣಭಟ್ಟು ...	321	ಹೊಂಕು ಅಂಕಣ 1 ಖಾಲಿ ಜಾಗ ...	15 30	5 5	8 17	ನರಸಪ್ಪಲ್ಲಿ ನಾರಪ್ಪನ ಮನೆ	ಸುಬ್ರಾಯಣ್ಣಿ ಸೋಲೇ ಮಂಡಪ್ಪಗೌಡ ನ ಮನೆ	ನರಸಿಂಹಪ್ಪಕೆಟ್ಟಿಕರ ಮನೆ	ಕೃಷ್ಣಭಟ್ಟರ ಮನೆ
	(9) ಸಣ್ಣಂಭಟ್ಟರ ನರಸಪ್ಪಲ್ಲಿನ ಮಗ ಕೃಷ್ಣಭಟ್ಟು.	322	ಪಟೇಲ್ ...	35	5	19½	ಪೆಂಕಟನಾರಣಪ್ಪನ ಪರ ಮನೆ	ಕೃಷ್ಣಭಟ್ಟರ ಮನೆ	ಸುಬ್ಬಾ ಉಪಾಧ್ಯರ ಮನೆ	ನರಸಪ್ಪ ನವರಮನೆ
	(10) ಅಮೃತೂರು ವೆಂಕಟನಾರಣಪ್ಪ	323	ಪಟೇಲ್ ...	12	5	7	ದಳಗುಡಿ ನಂಜುಂಡಯ್ಯನವರ ಮನೆ	ಸುಬ್ಬಾ ಉಪಾಧ್ಯರ ನರಸಪ್ಪಲ್ಲಿ ನವರ ಮನೆ	ವೆಂಕಟನಾರಣಪ್ಪನ ಪರ ಮನೆ	ವೆಂಕಟನಾರಣಪ್ಪನ ಪರ ಮನೆ
			ಪಟೇಲ್ ...	42	10	17				
	(11) ಸುಬ್ಬಾ ಉಪಾಧ್ಯರು ...	324	ಪಟೇಲ್ ...	43	5	24	ವೆಂಕಟಕೃಷ್ಣಪ್ಪಾ ಸ್ವಗೃಹ ಮನೆ	ವೆಂಕಟನಾರಣಪ್ಪನ ಪರ ಮನೆ	ಸುಬ್ಬಾ ಉಪಾಧ್ಯರ ಮನೆ	ದಳಗುಡಿ ನಂಜುಂಡ ಯ್ಯನವರ ಮನೆ
	(12) ಬೆಳಗುಡಿ ನಂಜುಂಡಯ್ಯ ...	395	ಪಟೇಲ್ ...	32	10+5	27	ನರಸಿಪ್ಪಯ್ಯನವರ ಮನೆ	ಪಟೇಲ್	ನಂಜುಂಡಯ್ಯನವರ ಮನೆ	ಸುಬ್ಬಾ ಉಪಾಧ್ಯರ ಮನೆ
	(13) ಮದ್ದೂರು ನರಸಿಪ್ಪಯ್ಯನವರು.	611	ಪಟೇಲ್ ...	26	2 5	14	ನಂಜುಂಡಯ್ಯನವರ ಮನೆ	ನಂಜುಂಡಯ್ಯನವರ ಮನೆ	ನರಸಿಂಹಯ್ಯನವರ ಮನೆ	ವೆಂಕಟಕೃಷ್ಣಪ್ಪಾ ಸ್ವಗೃಹ ಮನೆ
	(14) ವೆಂಕಟಕೃಷ್ಣಪ್ಪಾ ...	325	ಪಟೇಲ್ ...	22	5	12	ವಿಜ್ಞೇಂದ್ರಾಚಾರ್ಯರು ನ	ಸುಬ್ಬಾ ಉಪಾಧ್ಯರ ಮನೆ	ಪಟೇಲ್	ಪಟೇಲ್
	(15) ಚಿಂಡಗೆಹಳ್ಳಿ ಸುಬ್ಬಣ್ಣಿನವರ ಮಗ ವಿಜ್ಞೇಂದ್ರಾಚಾರ್.	326	ಪಟೇಲ್ ...	22	5	12	ಶ್ರೀಕಂಠಯ್ಯನವರ ಮನೆ	ವೆಂಕಟಕೃಷ್ಣಪ್ಪಾ ಸ್ವಗೃಹ ಮನೆ	ನಂಜುಂಡ ದೀಕ್ಷಿತರ ಮನೆ	ವಿಜ್ಞೇಂದ್ರಾಚಾರ್ ನ
	(16) ವೈದ್ಯದೀಕ್ಷಿತರ ನಂಜುಂಡ ದೀಕ್ಷಿತರು.	394	ಪಟೇಲ್ ...	65	5	36	ವೆಂಕಣ್ಣನವರ ಖಾಲಿ ಜಾಗ	ನರಸಿಂಹಯ್ಯನವರ ಮನೆ	ಪಟೇಲ್	ವಿಜ್ಞೇಂದ್ರಾಚಾರ್ ನ ಮಗ ಶ್ರೀಕಂಠಯ್ಯನವರ ಮನೆ
	(17) ಮುಳ್ಳೂರು ಶ್ರೀಕಂಠಯ್ಯನವರು.	327	ಪಟೇಲ್ ...	21	5	12	ಪಟೇಲ್	ವಿಜ್ಞೇಂದ್ರಾಚಾರ್ ನ	ಪಟೇಲ್	ಶ್ರೀಕಂಠಯ್ಯನವರ ಮನೆ

(18) ಪುಟ್ಟು ಸುಬ್ಬಯ್ಯ. ಸೆಂಕಣ್ಣಿ ...	328	436	ಖಾಲಿ ಜಾಗ	...	45	5	25	ಕೊಂಡಾವಧಾನಿ ಸುಬ್ಬ ಲಿಂಗಣ್ಣನ ಮನೆ	ಶ್ರೀಕಂಠಯ್ಯ ಮನು ಅಬ್ಬ ನಂಜುಂಡಿಯ ಪೈತರ ಮನೆ	ಪೆಟಿಗೀ	ಸೆಂಕಣ್ಣಿ ನವರ ಖಾಲಿ ಜಾಗ	
					24	5	13						
(19) ಕೊಂಡಾವಧಾನಿ ಸುಬ್ರಹ್ಮಣ್ಯಿ ಖಾಸ್ಗಿ.	320	437	ಪೆಟಿಗೀ	...	36	5	20	ಶ್ರೀಕಂಠಾಸ್ಪಗಳ ಮನೆ ಖಾಲಿಜಾಗ ಸಹ	ಸೆಂಕಣ್ಣಿ ನವರ ಖಾ ಲಿ ಜಾಗ	ಪೆಟಿಗೀ	ಸೆಂಕಣ್ಣಿ ನವರ ಖಾಲಿಜಾಗ	ಕೊಂಡಾವಧಾನಿ ಸುಬ್ಬ ಬಾಸ್ಗಳ ಮನೆ
			ಪೆಟಿಗೀ	...	12	5	7						
(20) ನರಸಿಪುರದ ಚಂದ್ರಶೇಖರ ಶಾಸ್ತ್ರಿ) ಶ್ರೀಕಂಠಾಸ್ಪಗಳ.	106	438	ಪೆಟಿಗೀ	...	60	5	33	ನಾರಣಪಪ್ಪುರ ಮನೆ	ಕೊಂಡಾವಧಾನಿ ಸುಬ್ಬ ಲಿಂಗಣ್ಣನ ಮನೆ ಬಾಸ್ಗಳ ಮನೆ	ಪೆಟಿಗೀ	ಲಿಂಗಣ್ಣನ ಮನೆ	ಚಂದ್ರಶೇಖರ ಶಾ ಸ್ತ್ರಿಗಳ ಮನೆ
(21) ಕಾಯಿ ಅಂಗಡಿ ನಂಜಪ್ಪನ ಮಗ ಲಿಂಗಣ್ಣ.	371	493	ಪೆಟಿಗೀ	...	50	5	28						
(22) ದೇವನಪಪ್ಪುರ ನಾರಣಪಪ್ಪು ...		492	ಪೆಟಿಗೀ	...	22	5	12	ನಿಂಗಾದೀಕ್ಷಿತರ ಮನೆ	ಲಿಂಗಣ್ಣ ಮಚ್ಚು ಲಿ ಚಂದ್ರಶೇಖರ ಸ್ಪಗಳ ಮನೆ	ಪೆಟಿಗೀ	ನಾರಣಪಪ್ಪುರ ಮನೆ	
					42	10	47						
(23) ಪುಗಾರದೀಕ್ಷಿತರ ನಿಂಗಾದೀಕ್ಷಿತರು	363	487	ಪೆಟಿಗೀ	...	53	11	65	ಶ್ರೀಕಂಠದೀಕ್ಷಿತರು ನ	ನಾರಣಪಪ್ಪುರ ಮನೆ	ಪೆಟಿಗೀ	ನಿಂಗಾದೀಕ್ಷಿತರ ನು ನ	
(24) ಅರಸೀಕೆರೆ ಶ್ರೀಕಂಠ ದೀಕ್ಷಿತರು.	362	485	ಪೆಟಿಗೀ	...	40	10	44½						
			ಪೆಟಿಗೀ	...	14	10 + 8 / 2	14	ರಸೆ			ನಿಂಗಾದೀಕ್ಷಿತರ ನು ನ	ಶ್ರೀಕಂಠದೀಕ್ಷಿತರ ಮನೆ	ಯಜ್ಞೇಶ್ವರ ಶಾಸ್ತ್ರಿ) ಗಳ ಮನೆ
			ಹೊಂಚು 1½ ಅಂಕ ಣ.		15	0 + 3 / 2	2½						

ತಾರೀಖು 28ನೆ ಆಗಸ್ಟು 1909.

ನಂ. 2076—ಮ್ಯು. 559-07-45, ಮಂಡ್ಯ ಟವನಿನ ಆಸುಪಾಸು ಇರುವ (1) ಕಲ್ಲಹಳ್ಳಿ (2) ಚಿಂದಿಗಿರಿದೊಡ್ಡಿ, (3) ಚಿಕ್ಕಮಂಡ್ಯ, (4) ಮೊಟ್ಟೊ ಲಿಂಗಂಣನದೊಡ್ಡಿ, (5) ದ್ಯಾವೆಗೌಡನದೊಡ್ಡಿ ಮತ್ತು (6) ಹೊಸಹಳ್ಳಿ—ಈ ಮಜರೆಗಳನ್ನು ಸೇರಿಸಿ ಮಂಡ್ಯ ಟವನನ್ನು ಖಾಯಂ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂತ ಉದ್ದೇಶಿಸಿ ಇದೆ ಎಂಬದಾಗಿ, 1909ನೆ ಇಸವಿಯ 7ನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನ 8ನೆ ಪ್ರಕರಣದ ಮೇರೆಗೆ 1909ನೆ ಇಸವಿಯ ಮಾರ್ಚಿ 4ನೆ ತಾರೀಖಿನಲ್ಲಿ 1909ನೆ ಸಾಲ್ ಇಂಗ್ಲಿಷ್ ಗೆಜೆಟ್ಟಿನ 2ನೆ ಭಾಗದ 272ನೆ ಪುಟದಲ್ಲಿಯೂ ಕನ್ನಡ ಗೆಜೆಟ್ಟಿನ 122ನೆ ಪುಟದಲ್ಲಿಯೂ 1909ನೆ ಜನವರಿ ಮಾಹೆ 7ನೆ ತಾರೀಖಿನ ಪ್ರಕಟನೆಯ ಮೂಲಕ ಫಾಯಿಷ್ ಮಾಡಿರುವುದಲ್ಲದೆ ಸದರಿ ಪ್ರಕಟನೆಯಲ್ಲಿ ನಮೂದಿಸಿರುವ ಸ್ಥಳೀಯ ಸರಹದ್ದಿನೊಳಗೆ ಬಹಿರಂಗವಾದ ಸ್ಥಳಗಳಲ್ಲಿ ಚಿಕಟುಾಯಿಸುವುದರ ಮೂಲಕ ಪ್ರಸಿದ್ಧಪಡಿಸಿರಲಾಗಿ, ಸದರಿ ಮಜರೆ ಗ್ರಾಮುಗಳನ್ನು ಮ್ಯುನಿಸಿಪಲ್ ಸರಹದ್ದಿನೊಳಗೆ ಸೇರಿಸಕೂಡಬೆಂಖ ಬಗ್ಯೆ ಪ್ರಬಲವಾದ ಆಕ್ಷೇಪಣೆಗಳು ಬಂದಿರುವುದರಿಂದ, ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದರವರ ಸರ್ಕಾರದವರು ಸದರಿ ರೆಗ್ಯುಲೇಷನಿನ 4 (1)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸದರಿ ಮಜರೆ ಗ್ರಾಮುಗಳು ಶಿವಾಯಿ ಮಂಡ್ಯ ಟವನನ್ನು ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಿ ಸದರಿ ಮ್ಯುನಿಸಿಪಾಲಿಟಿಯ ಸರಹದ್ದು 1909ನೆ ಅಕ್ಟೋಬರ್ 1ನೆ ತಾರೀಖಿನ ದಿನವೂ ಅನಂತರವೂ ಈ ಕೆಳಗೆ ನಮೂದಿಸುವ ಪ್ರಕಾರ ಇರಬೇಕೆಂದು ಆಜ್ಞೆ ದಯಪಾಲಿಸಿರುತ್ತಾರೆ.

ಮಂಡ್ಯ ಮ್ಯುನಿಸಿಪಾಲಿಟಿಯ ಸರಹದ್ದು ಲೈನು ಮಂಡ್ಯ ಗ್ರಾಮದ ಸರ್ವೆ 846ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಆರಂಭವಾಗಿ ಮೈಸೂರು-ಬೆಂಗಳೂರು ರಸ್ತೆಯನ್ನು ಮುಟ್ಟಿ ಪಶ್ಚಿಮಾಭಿಮುಖವಾಗಿ ಸರ್ವೆ 846 ಮತ್ತು 845ನೆ ನಂಬರುಗಳ ಉತ್ತರ ಸರಹದ್ದಿನ ಕಡೆಯಲ್ಲಿಯೇ ಹೊರಟು ಸರ್ವೆ 845ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ. ನಂತರ ದಕ್ಷಿಣಾಭಿಮುಖವಾಗಿ ಸದರಿ ನಂಬರಿನ ಪಶ್ಚಿಮ ಸರಹದ್ದಿನಲ್ಲಿ ಹೊರಟು ಮಂಡ್ಯದ ರೈಲ್ವೆ ಸ್ಟೇಷನ್ನಿಗೆ ಹೋಗುವ ಸಂಣರಸ್ತೆಯನ್ನು ದಾಟಿ ಸರ್ವೆ 850ನೆ ನಂಬರಿನ ಆಗ್ನೇಯ ಮೂಲೆಯನ್ನು ಮುಟ್ಟುತ್ತದೆ. ನಂತರ ಅದು ನೈರುತ್ಯಾಭಿಮುಖವಾಗಿ ಸರ್ವೆ 854ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರಿ ಆ ಸ್ಥಳದಲ್ಲಿ ರೈಲ್ವೆ ರಸ್ತೆಯನ್ನು ದಾಟಿಕೊಂಡು ನಂತರ ಅಲ್ಲಿಂದ ತಿರುಗಿ ದಕ್ಷಿಣಾಭಿಮುಖವಾಗಿ ಸರ್ವೆ 858 ಮತ್ತು 859ನೆ ನಂಬರುಗಳ ಪಶ್ಚಿಮ ಗಡಿಯಲ್ಲಿಯೂ ಮತ್ತು ಸರ್ವೆ 1 ಮತ್ತು 2ನೆ ನಂಬರುಗಳ ಪೂರ್ವ ಗಡಿಯಲ್ಲಿಯೂ ಹೋಗಿ ಸದರಿ 2ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ನಂತರ ಅದು ಪಶ್ಚಿಮಾಭಿಮುಖವಾಗಿ ಸರ್ವೆ 2ನೆ ನಂಬರಿನ ಸರಹದ್ದಿನ ಲೈನಿನ ಕಡೆಯಲ್ಲಿ ಹೋಗಿ ಸರ್ವೆ 142ನೆ ನಂಬರಿನ ಪೂರ್ವ ಗಡಿಯನ್ನು ಮುಟ್ಟುತ್ತದೆ. ನಂತರ ಅದು ದಕ್ಷಿಣಾಭಿಮುಖವಾಗಿ ಅದೇ ಸರ್ವೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ನಂತರ ಅದು ಪಶ್ಚಿಮಾಭಿಮುಖವಾಗಿ ಸರ್ವೆ 142ನೆ ನಂಬರಿನ ದಕ್ಷಿಣ ಗಡಿಯಲ್ಲಿ ಹೊರಟು ಬನ್ನೂರು ರಸ್ತೆಯನ್ನು ದಾಟಿಕೊಂಡು ಸರ್ವೆ 153ನೆ ನಂಬರಿನ ಪೂರ್ವ ಗಡಿಯನ್ನು ಮುಟ್ಟಿ ಅಲ್ಲಿಂದಾ ಉತ್ತರಾಭಿಮುಖವಾಗಿ ಸರ್ವೆ 153 ಮತ್ತು 146ನೆ ನಂಬರುಗಳ ಪೂರ್ವ ಗಡಿಯನ್ನನುಸರಿಸಿ 146ನೆ ನಂಬರಿನ ಈಶಾನ್ಯದಲ್ಲಿರುವ ರೈಲ್ವೆ ರಸ್ತೆಯನ್ನು ಸೇರುತ್ತದೆ. ನಂತರ ಅದು ರೈಲ್ವೆ ರಸ್ತೆಯನ್ನು ದಾಟಿ ಸರ್ವೆ 186ನೆ ನಂಬರಿನ ಆಗ್ನೇಯ ಸ್ಥಾನವನ್ನು ಸೇರಿ ಉತ್ತರಾಭಿಮುಖವನ್ನೇ ಅನುಸರಿಸಿ ಸರ್ವೆ 186ನೆ ನಂಬರಿನ ಪೂರ್ವ ಗಡಿಯಲ್ಲಿಯೇ ಹೊರಟು ಸದರಿ 186ನೆ ನಂಬರಿನ ಈಶಾನ್ಯಸ್ಥಾನವನ್ನು ಸೇರುತ್ತದೆ. ನಂತರ ಅದು ಪಶ್ಚಿಮಾಭಿಮುಖವಾಗಿ ತಿರಿಗಿ ಸರ್ವೆ 186-865 ಮತ್ತು 185ನೆ ನಂಬರುಗಳಿಗೆ ಉತ್ತರಗಡಿಯಾಗಿರುವ ಮೈಸೂರು-ಬೆಂಗಳೂರು ರಸ್ತೆಯ ಕಡೆಯಲ್ಲಿಯೇ ಹೊರಟು, ಸರ್ವೆ 198ನೆ ನಂಬರಿನ ಪೂರ್ವ ಸರಹದ್ದನ್ನು ಸೇರುತ್ತದೆ. ಅಲ್ಲಿಂದ ಅದು ಉತ್ತರಾಭಿಮುಖವಾಗಿ ತಿರುಗಿ ಸರ್ವೆ 198ನೆ ನಂಬರಿನ ಪೂರ್ವ ಗಡಿಯಲ್ಲಿಯೇ ಹೋಗಿ, ಮೈಸೂರು-ಬೆಂಗಳೂರು ರಸ್ತೆಯನ್ನು ದಾಟಿ ಸರ್ವೆ 188ನೆ ನಂಬರಿನ ದಕ್ಷಿಣ ಗಡಿಯನ್ನು ಸೇರುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಆ ಸರ್ವೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅಲ್ಲಿ ಈಶಾನ್ಯಕಡೆಗೆ ತಿರುಗಿ ಸರ್ವೆ 186ನೆ ನಂಬರಿಗೆ ವಾಯವ್ಯದಲ್ಲಿರುವ ಮಂಡ್ಯದ ಕೆರೆಯ ಅಂಗಳದ ಗಡಿಯನ್ನು ಮುಟ್ಟುತ್ತದೆ. ನಂತರ ಪೂರ್ವಾಭಿಮುಖವಾಗಿ ಮಂಡ್ಯದ ಕೆರೆ ಅಂಗಳದ ಗಡಿಯಲ್ಲಿಯೇ ಹೋಗಿ ಮೈಸೂರು-ಬೆಂಗಳೂರು ರಸ್ತೆಯ ಆಚಿನಲ್ಲಿ ಆದೇ ಕೆರೆ ಆಗ್ನೇಯ ಸ್ಥಾನವನ್ನು ಸೇರುತ್ತದೆ. ಅಲ್ಲಿಂದ ಉತ್ತರಾಭಿಮುಖವಾಗಿ ಸರ್ವೆ 880ನೆ ನಂಬರಿನ ನೈರುತ್ಯ ಸ್ಥಾನವನ್ನು ಸೇರುತ್ತದೆ. ನಂತರ ಪೂರ್ವಕ್ಕೆ ತಿರುಗಿ ಸರ್ವೆ 882ನೆ ನಂಬರಿನ ಪೂರ್ವ ಮೂಲೆಯನ್ನು ಸೇರುತ್ತದೆ. ನಂತರ ಅದು ವಾಯವ್ಯಾಭಿಮುಖವಾಗಿ ಸರ್ವೆ 881ನೆ ನಂಬರನ್ನು ಮುಟ್ಟಿ, ಆ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಹೋಗುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ಸರ್ವೆ 879ನೆನಂಬರಿನ ಉತ್ತರ ಗಡಿಯಲ್ಲಿಯೂ ಮತ್ತು ಮಂಡ್ಯದ ಕೆರೆಯ ಅಂಗಳದ ಗಡಿ ಲೈನಿನಲ್ಲಿಯೂ ಹೋಗಿ ಸದರಿ ಕೆರೆಯ ಕೋಡಿ ಹಳ್ಳವನ್ನು ಸೇರುತ್ತದೆ. ಅಲ್ಲಿ ಕೋಡಿಹಳ್ಳ ದಾಟುವಹಾಗೆ ಬಸರಾಳು ರಸ್ತೆಯನ್ನು ದಾಟಿ ನೈರುತ್ಯಾಭಿಮುಖವಾಗಿ ಸರ್ವೆ 786, 790 ಮತ್ತು 791ನೆ ನಂಬರುಗಳ ಸರಹದ್ದು ಲೈನನ್ನನುಸರಿಸಿ ಹೋಗುತ್ತದೆ. ನಂತರ ಅದು ಪೂರ್ವಾಭಿಮುಖವಾಗಿ ಸರ್ವೆ 792 ಮತ್ತು 84ನೆ ನಂಬರುಗಳ ದಕ್ಷಿಣ ಗಡಿಯಲ್ಲಿ ಹೊರಟು ಸರ್ವೆ 84ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಹಳ್ಳವನ್ನು ಸೇರುತ್ತದೆ. ಅಲ್ಲಿ ಹಳ್ಳವನ್ನು ದಾಟಿ ಪೂರ್ವಾಭಿಮುಖವಾಗಿ ಸರ್ವೆ 840, 839 ಮತ್ತು 838ನೆ ನಂಬರುಗಳ ದಕ್ಷಿಣ ಗಡಿಯಲ್ಲಿ ಸರ್ವೆ 838ನೆ ನಂಬರನ್ನು ಸೇರುವ ವರಿಗೂ ಹೋಗಿ ಅಲ್ಲಿ ಮೈಸೂರು-ಬೆಂಗಳೂರು ರಸ್ತೆಯನ್ನು ದಾಟಿ ಮೊದಲು ಹೊರಟ ಸ್ಥಳ ಅಂದರೆ ಸರ್ವೆ 846ನೆ ನಂಬರಿನ ಈಶಾನ್ಯ ಸ್ಥಾನವನ್ನು ಸೇರುತ್ತದೆ.

ತಾರೀಖು 4ನೆ ಸೆಪ್ಟಂಬರ್ 1909.

ನಂ. ಜ. 1388—ಜ. ಮಿ. 22-08-78, ರೆವಿನ್ಯೂ ಕಮಿಷನರವರ ಅಡಿಷನಲ್ ಅಸಿಸ್ಟೆಂಟರಾದ ಮಿ|| ಕೆ. ಸುಬ್ಬರಾವ್, ಬಿ.ಎ. ಯವರಿಗೆ ಅಸಿಸ್ಟೆಂಟ್ ಕಮಿಷನರುಗಳ ಬಿ. ಪೆಡ್ಯೂಲಿನಲ್ಲಿ, 5ನೆ ತರಗತಿಯಿಂದ 4ನೆ ತರಗತಿಗೆ 1909ನೆ ಇಸವಿ ಜೂನ್ 18ನೆ ತಾರೀಖು ಲಾಗಾಯಿತು ಬಡ್ತಿಕೊಟ್ಟು ಇರುತ್ತದೆ.

ತಾರೀಖು 1ನೆ ಸೆಪ್ಟಂಬರ್ 1909.

ನಂ. ಜ. 1361—ಜ. ರಿ. 21-08-18, ಪ್ರಜಾಪ್ರತಿನಿಧಿ ಸಭೆಗೆ ವೆ ಂಬರುಗಳಾಗಿ ಚುನಾಯಿಸಲ್ಪಟ್ಟ ಬೋಡ್ಡ ಮನುಷ್ಯರುಗಳ ಪಟ್ಟಿಯನ್ನು ಸಮಸ್ತರ ತಿಳುವಳಿಕೆ ಬಗ್ಗೆ ಇದರಡಿ ಪ್ರಕಟಿಸಿ ಇರುತ್ತದೆ.

ಮೈಸೂರು ಡಿಸ್ಟ್ರಿಕ್ಟ್.

ಚುನಾವಣೆಯ ಪ್ರದೇಶ.		ಪ್ರತಿನಿಧಿಗಳ ಹೆಸರು.		ಕಸಬು.
ಮೈಸೂರು ತಾಲ್ಲೂಕು	...	1. ಮಿ॥ ಸೈದ್ ಮೊಹಿದಿಸಾಬ್	...	ಜಮೀದಾರ್ ಮತ್ತು ಕಂಟ್ರಾಕ್ಟರ್
		2. ,, ಸಿದ್ದೇಗೌಡ	...	ಪಟೇಲ್ ಮತ್ತು ಜಮೀನುದಾರು
		3. ,, ವಿ. ರಾಘವಾಚಾರಿ	...	ಇನಾಂದಾರು ಮತ್ತು ಅಡ್ವೊಕೇಟ್
		4. ,, ಮಾದಪ್ಪ	...	ಇನಾಂದಾರು
ಎಡತೊರೆ ತಾಲ್ಲೂಕು	...	1. ,, ಎ. ರಾಮಣ್ಣ	...	ಜಮೀನುದಾರ್ ಮತ್ತು ಅಡ್ವೊಕೇಟ್
		2. ,, ದೇವಾಜಿರಾವ್	...	ಜಮೀನುದಾರು
		3. ,, ಕೃಷ್ಣಪ್ಪ	...	ಜಮೀನುದಾರು ಮತ್ತು ಸಾಹುಕಾರು.
		4. ,, ಬಾದಾಂ ಅಚ್ಚಯ್ಯ ಶೆಟ್ಟಿ	...	ವರ್ತಕ
ಹುಣಸೂರು ತಾಲ್ಲೂಕು	...	1. ,, ಉಂಡವಾಡಿ ನರಸಿಂಗರಾವ್	...	ಶ್ಯಾನುಭೋಗ ಮತ್ತು ಜಮೀದಾರ್
		2. ,, ಶೇಷಗಿರಯ್ಯ	...	ಡಿಟೋ
		3. ,, ಬೆಟ್ಟದಪುರ ಚಿಕ್ಕಸುಬ್ಬರಾವ್	...	ಡಿಟೋ
ಹೆಗ್ಗಡದೇವನಕೋಟೆ ತಾಲ್ಲೂಕು	...	1. ,, ಎಂ. ಸುಬ್ಬರಾವ್	...	ಜಮೀದಾರು ಮತ್ತು ಕಂಟ್ರಾಕ್ಟರು.
		2. ,, ಎಂ. ಲಕ್ಷ್ಮಿನಾರಣಪ್ಪ	...	ಶ್ಯಾನುಭೋಗ ಮತ್ತು ಜಮೀದಾರ್
ಗುಂಡ್ಲುಪೇಟೆ ತಾಲ್ಲೂಕು	...	1. ,, ವಾಲಹಟ್ಟಿ ದೇವಪ್ಪ	...	ಜಮೀನುದಾರು
		2. ,, ಸಿದ್ದಲಿಂಗಪ್ಪ	...	ಡಿಟೋ ಮತ್ತು ಪಟೇಲ್.
ಚಾಮರಾಜನಗರ ತಾಲ್ಲೂಕು	...	1. ,, ಶಾಮಯ್ಯಂಗಾರ್	...	ಜಮೀನುದಾರು
		2. ,, ವೆಂಕಟಶಾಮೈಯ್ಯ	...	ಜಮೀದಾರು ಮತ್ತು ಶಾನುಭೋಗ
		3. ,, ಸುಬ್ಬರಾವೈಯ್ಯ	...	ಡಿಟೋ
ನಂಜನಗೂಡು ತಾಲ್ಲೂಕು	...	1. ,, ವೆಂಕಟಶಾಮೈಯ್ಯ, ಬಿ.ಎ.ಬಿ.ಎಲ್.		ಜಮೀದಾರು ಮತ್ತು ಅಡ್ವೊಕೇಟ್.
		2. ,, ಇ. ರಾಮರಾವ್	...	ಜಮೀದಾರು
		3. ,, ಪದ್ಮಣ್ಣ	...	ಜಮೀದಾರು ಮತ್ತು ಲೇವಾದೇವಿ
ತಿ॥ ನರಸೀಪುರ ತಾಲ್ಲೂಕು	...	1. ,, ರಂಗಾಚಾರ್	...	ಇನಾಂದಾರು
		2. ,, ಟಿ. ಕೃಷ್ಣರಾವ್	...	ಜಮೀದಾರು
		3. ,, ಶಿವಬಸದೇವರು	...	ಡಿಟೋ ಮತ್ತು ಸಾಹುಕಾರು
ಶ್ರೀರಂಗಪಟ್ಟಣ ತಾಲ್ಲೂಕು	...	1. ,, ವೀಣೆ ರಂಗಸ್ವಾಮಯ್ಯಂಗಾರ್	...	ಜಮೀದಾರು
		2. ,, ಕೃಷ್ಣಾಚಾರ್	...	ಶ್ಯಾನುಭೋಗ
		3. ,, ತಿಮ್ಮಣಯ್ಯ	...	ಜಮೀದಾರ್ ಮತ್ತು ಶ್ಯಾನುಭೋಗ
		4. ,, ಶ್ರೀಕಂಠಶೆಟ್ಟಿ	...	ವರ್ತಕ
ಕೃಷ್ಣರಾಜಪೇಟೆ ತಾಲ್ಲೂಕು	...	1. ,, ಕೃಷ್ಣಶಾಸ್ತ್ರಿ	...	ಜಮೀದಾರು
		2. ,, ಸೋಮಶೆಟ್ಟಿ	...	ಡಿಟೋ
		3. ,, ಯಾಲಕ್ಕಿಗೌಡ	...	ಜಮೀದಾರು ಮತ್ತು ಪಟೇಲ್
ನಾಗಮಂಗಲ ತಾಲ್ಲೂಕು	...	1. ,, ಚಂದ್ರಶೇಖರಯ್ಯ	...	ಜಮೀದಾರು
		2. ,, ಗುಂಡಪ್ಪ	...	ಜಮೀದಾರ್ ಮತ್ತು ಶ್ಯಾನುಭೋಗ
		3. ,, ತಿಮ್ಮೇಗೌಡ	...	ಪಟೇಲ್ ಮತ್ತು ಜಮೀದಾರು
ಮಂಡ್ಯ ತಾಲ್ಲೂಕು	...	1. ,, ಪರಮೇಶ್ವರಯ್ಯ	...	ಶ್ಯಾನುಭೋಗ ಮತ್ತು ಜಮೀದಾರು
		2. ,, ಲಿಂಗಣ್ಣಯ್ಯ	...	ಡಿಟೋ
		3. ,, ಚಿಕ್ಕೆಗೌಡ	...	ಜಮೀದಾರು ಮತ್ತು ಪಟೇಲ್
ಮಳವಳ್ಳಿ ತಾಲ್ಲೂಕು	...	1. ,, ರಾಮ್ಯಯ್ಯ	...	ಶ್ಯಾನುಭೋಗ ಮತ್ತು ಜಮೀದಾರ್
		2. ,, ದೊಲತ್ ಹನುಮಯ್ಯಶೆಟ್ಟಿ	...	ವರ್ತಕ
ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್		1. ,, ಎಂ. ವೆಂಕಟಕೃಷ್ಣಯ್ಯ	...	ಸ್ಕೂಲ್ ಮಾಸ್ಟರು
		2. ,, ಎಸ್. ಶ್ರೀಕಂಠಯ್ಯ	...	ಲೇವಾದೇವಿ
		3. ,, ಮಾದೆಪ್ಪ	...	ಜವಳಿ ವ್ಯಾಪಾರ
		4. ,, ಎಂ ಸಿ. ರಂಗಯ್ಯಂಗಾರ್, ಬಿ.ಎ.		ಅಡ್ವೊಕೇಟ್
ಶ್ರೀರಂಗಪಟ್ಟಣ ಮ್ಯುನಿಸಿಪಲ್ ಬೋರ್ಡ್	...	1. ,, ಬಿ. ನರಸಿಂಗರಾವ್	...	ಫರ್ಸ್ಟ್ ಗ್ರೇಡ್ ಪ್ಲೀಡರ್
ಹುಣಸೂರು ಡಿಟೋ	...	1. ,, ತಿರುವೆಂಕಟಶಾಮಿ ಮೊದಲಿಯಾರ್		ವರ್ತಕ ಮತ್ತು ಜಮೀದಾರು
ನಂಜನಗೂಡು ಡಿಟೋ	...	1. ,, ಚಿಕ್ಕ ಪುಟ್ಟಸಾಮಿಶೆಟ್ಟಿ	...	ಸಾಹುಕಾರು ಮತ್ತು ಜಮೀದಾರ್
ಟಿ.ನರಸೀಪುರ ಡಿಟೋ	...	1. ,, ಶೇಷಾಚಲ ಜೋಯಿಸ	...	ಜಮೀನುದಾರು
ಮಳವಳ್ಳಿ ಡಿಟೋ	...	1. ,, ಸುಬ್ಬಯ್ಯಶೆಟ್ಟಿ	...	ವರ್ತಕ
ಮೈಸೂರು ಡಿಸ್ಟ್ರಿಕ್ಟ್ ಫಂಡು ಬೋರ್ಡ್.		1. ,, ಅಂಬಲ್ಲೆ ಅಣ್ಣಯ್ಯಪಂಡಿತ	...	ಜಮೀದಾರು
		2. ,, ಲಿಂಗೆಗೌಡ	...	ಜಮೀದಾರು ಮತ್ತು ಪಟೇಲ್
ಎದುಗಿರಿ ಸದಾನಂದ ವರ್ಧನಿ ಸಭಾ ಮೇಲು ಕೋಟೆ.		1. ,, ಎಂ. ಲಕ್ಷ್ಮೀನರಸಿಂಹಯ್ಯಂಗಾರ್		ಅಡ್ವೊಕೇಟ್
ಅಂಜುಮಾನಿ ಹಿಮಾಯತ್ ಇಸ್ಲಮ್	...	1. ,, ಮೌಲ್ವಿ ದರ್ವಿಷ್ ಪೀರ್	...	ಮುತ್ತವಲಿ ಜಮ್ಮಾಮಸೀದಿ ಮೈಸೂರು.

ತಾರೀಖು 1ನೆ ಸೆಪ್ಟಂಬರ್ 1909.

ನಂ. ಜ. 1357—ಜ. ರಿ. 25-08-10, ಸ್ರ 1909ನೆ ಜುಲೈ 14ನೆ ಮುಕ್ತಂನ ಜ. 225—ಜ. ರಿ. 25-08-3ನೆ ನಂಬರ್ ಇಸ್ತಿಹಾರ್ನ ಮೆಯೊಂದಿಗೆ ಫಾಯಿಷ್ಮಾಡೋಣಾವ ಮೂಗಡಿ ತಾಲ್ಲೂಕಿನ ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳನ್ನು ಚುನಾಯಿಸುವದಕ್ಕೂ ಮತ್ತು ಮೆಂಬರಾಗಿ ಚುನಾಯಿಸಲ್ಪಡಲಿಕ್ಕೂ ಅರ್ಹರಾದ ಜನಗಳ ಪಟ್ಟಿಗಳಲ್ಲಿನ ಇದರಡಿಕಂಡ ತಿದ್ದುಪಾಟುಗಳನ್ನು ಸಮಸ್ತರ ತಿಳುವಳಿಕೆ ಬಗ್ಯೆ ಪ್ರಕಟಿಸಿ ಇರುತ್ತದೆ.

ಹೆಚ್ಚಾಗಿ ಸೇರಿಸಿಕೊಳ್ಳಬೇಕಾದ್ದು.

ಪಟ್ಟಿ.	ಹೆಸರು.	ವಾಸಸ್ಥಳ.	ಕಸಬು.
A.	... ವಿ|| ಶ್ರೀನಿವಾಸಯ್ಯಂಗಾರ್	... ಮೂಗಡಿ	... ಜೋಡಿದಾರ್.

ತಿದ್ದುಪಾಟು.

ಮೂಗಡಿ ತಾಲ್ಲೂಕಿನ A. ಪಟ್ಟಿಯಲ್ಲಿ 8 ಮತ್ತು 32ನೆ ಜಂಜರು ನಂಬರಾಗಿಯೂ ಮತ್ತು B. ಪಟ್ಟಿಯಲ್ಲಿ 8 ಮತ್ತು 17ನೆ ನಂಬರಾಗಿಯೂ.

ಕ್ರಮವಾಗಿ ದಾಖಲಾಗಿರುವ ವಿ|| ಮಲ್ಲಪ್ಪಶೆಟ್ಟಿ ಮತ್ತು ಹನುಮಶೆಟ್ಟಿ ಎಂಬ ಹೆಸರುಗಳನ್ನು ಬಿಟ್ಟುಬಿಡತಕ್ಕದ್ದು.

ತಾರೀಖು 1ನೆ ಸೆಪ್ಟಂಬರ್ 1909.

ನಂ. ಜ. 1363—ಜ. ರಿ. 18-08-22, ಮೈಸೂರು ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರರಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರ ಪಟ್ಟಿಯನ್ನು ಸಮಸ್ತರ ತಿಳುವಳಿಕೆಯ ಬಗ್ಯೆ ಈ ಕೆಳಗೆ ಪ್ರಕಟಿಸಿದೆ.

ಹಾಸನದ ಡಿಸ್ಟ್ರಿಕ್ಟ್.

ಚುನಾವಣೆ ಮಾಡಿದ ಪ್ರದೇಶ.		ಪ್ರತಿನಿಧಿಗಳ ಹೆಸರು.		ಕಸಬು.
ಹಾಸನ ತಾಲ್ಲೂಕು	...	1. ವಿ|| ಲಕ್ಷ್ಮೀನರಸಿಂಹಾಚಾರ್ಯ್	...	ಪ್ಲೀಡರ್
		2. ,, ಜಿ. ಶ್ರೀನಿವಾಸಮೂರ್ತಿ	...	ಜಮಿನ್‌ದಾರ್.
		3. ,, ಮಹಾಲಿಂಗಣ್ಣ	...	ಜಮಿನ್‌ದಾರ್ ಮತ್ತು ಪಿಂಚ್ಡ ಪಡೆದ ಟೈಜರ್.
		4. ,, ಚನ್ನಕೇಶವ ಶೆಟ್ಟಿ	...	ವರ್ತಕ
ಮಂಜರಾಬಾದು ತಾಲ್ಲೂಕು	...	1. ,, ವೆಂಕಟರಾಮಯ್ಯ	...	ಶ್ಯಾನುಭಾಗ ಮತ್ತು ಜಮಿನ್‌ದಾರ್
		2. ,, ಬಿ. ನಂಜೆಗೌಡ	...	ಜಮಿನ್‌ದಾರ್
		3. ,, ಬಿ. ಸಂಜೆಗೌಡ	...	ಡಿಟೋ
		4. ,, ರಂಗಣ್ಣ	...	ಜಮೀನ್‌ದಾರ್ ಮತ್ತು ಶ್ಯಾನುಭಾಗ
ಬೇಲೂರು ತಾಲ್ಲೂಕು	...	1. ,, ಕೇಶವದಾಸ್ಯೆಯ್ಯಂಗಾರ್	...	ಜಮಿನ್‌ದಾರ್ ಮತ್ತು ಪ್ಲೀಡರ್
		2. ,, ಎಚ್. ವೀರಶೆಟ್ಟಿ	...	ಜಮೀನ್‌ದಾರ್
		3. ,, ಎ. ಪಾಯಣ್ಣ	...	ಡಿಟೋ
ಅರಸೀಕೆರೆ ತಾಲ್ಲೂಕು	...	1. ,, ದಾಸಪ್ಪ	...	ಶ್ಯಾನುಭಾಗ
		2. ,, ಮರುಳಶಿದ್ಧಪ್ಪ	...	ಜಮೀನ್‌ದಾರ್
		3. ,, ಚೌಡಯ್ಯ	...	ಕಂಟ್ರಾಕ್ಟರ್
ಚನ್ನರಾಯಪಟ್ಟಣ ತಾಲ್ಲೂಕು	...	1. ,, ಎಂ. ವೆಂಕಟರಾಮಯ್ಯ	...	ಜಮಿನ್‌ದಾರ್
		2. ,, ದಿಂಡಗೂರು ಚೌಡಯ್ಯ	...	ಡಿಟೋ
		3. ,, ಚನ್ನರಾಯಪಟ್ಟಣದ ವೆಂಕಟರಾಮೈಯ್ಯ.		ಡಿಟೋ
ಹೊಳೆ ನರಸೀಪುರ ತಾಲ್ಲೂಕು	...	1. ,, ವೆಂಕಟರಾಮೈಯ್ಯ	...	ಪ್ಲೀಡರ್ ಮತ್ತು ಜಮಿನ್‌ದಾರ್
		2. ,, ಎ. ವೆಂಕಟಾಚಾರ್	...	ಶ್ಯಾನುಭಾಗ ಮತ್ತು ಜಮಿನ್‌ದಾರ್
ಅರಕಲಗೂಡು ತಾಲ್ಲೂಕು	...	1. ,, ಕೆ. ಸೂರ್ಯನಾರಾಯಣಪ್ಪ	...	ಜಮೀನ್‌ದಾರ್
		2. ,, ವೆಂಕಟಸುಬ್ಬಯ್ಯ	...	ಡಿಟೋ
		3. ,, ರಾಮಸ್ವಾಮಿಶೆಟ್ಟಿ	...	ಜಮೀನ್‌ದಾರ್ರು.
ಹಾಸನದ ಟವ್ನ ಮ್ಯುನಿಸಿಪಾಲಿಟಿ	...	1. ,, ಅಳಸಿಂಗಾಚಾರ್	...	ಕಂಟ್ರಾಕ್ಟರ್
		2. ,, ಕೆ. ಮಹಾದೇವಪ್ಪ	...	ವರ್ತಕ
ಹಾಸನದ ಡಿ|| ಬೋ||	...	1. ,, ಕೆ. ತಮ್ಮಯ್ಯ	...	ಕಾಫಿ ಪ್ಲಾಂಟರ್
		2. ,, ಸೂರ್ಯನಾರಾಯಣ ಶೆಟ್ಟಿ	...	ವರ್ತಕ
ಹೊಳೆನರಸೀಪುರ ಮ್ಯುನಿಸಿಪಾಲಿಟಿ	...	1. ,, ವೆಂಕೋಬರಾವ್	...	ಪಿಂಚ್ಡ ಪಡೆದ ದರೋಗ
ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘ.		1. ,, ಜೆ. ಎ. ಹಾರಿಸ್	...	ಕಾಫಿ ಪ್ಲಾಂಟರ್
ದಕ್ಷಿಣ ಮೈಸೂರು ದೇಶೀಯ ಪ್ಲಾಂಟರುಗಳ ಸಂಘ.		1. ,, ಎಂ. ನಂಜೇಗೌಡ	...	ಜಮಿನ್‌ದಾರ್ ಮತ್ತು ಪಟೇಲ್

ತಾರೀಖು 2ನೆ ಸೆಪ್ಟೆಂಬರ್ 1909.

ನಂ. 2195—ಲೋ. ಬೋ. 56-09-3, ಸ|| 1894ನೆ ವರ್ಷದ 7ನೆ ನಂಬರ್ ಲ್ಯಾಂಡು ಅಕ್ವಿಜಿಷನ್ ರೆಗ್ಯುಲೇಷನ್ನಿನ 6ನೆ ಪ್ರಕರಣವನ್ನು ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಅಂದರೆ, ದಾವಣಗೆರೆ-ಜಗಲೂರು ರಸ್ತೆ ಬದಲಾವಣೆಗೋಸ್ಕರ ಅವಶ್ಯವಾಗಿದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c ಪ್ರಕರಣಗಳನ್ನು ಅನುಸರಿಸಿ ದಾವಣಗೆರೆ ಸಬ್ ಡಿವಿಜ಼ನ್ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟು ಇದೆ.

ಡಿಸ್ಟ್ರಿಕ್ಟು	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಖಾತೇದಾರ್ ಯಾ ಮಾಲೀಕರ ಹೆಸರು.	ಸರ್ವೆ ನಂಬರ್	ಖುಷ್ಕಿ.	ಒಟ್ಟು ವಿಸ್ತೀರ್ಣ.		ಖರಾಬು.		ಉಳಿದ ವಿಸ್ತೀರ್ಣ.		ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಕಂದಾಯ.			ಚತುರ್ಗಡಿ.			
																		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.	ಎ.	ಗು.	ಎ.	ಗು.	ರೂ.	ಆ.	ಎ.	ಗು.	ರೂ.	ಆ.	ಪೈ.				
ಚಿತ್ರದುರ್ಗ	ದಾವಣಗೆರೆ	ಅರಗೋಡು	ಅಣಜಿ.	ನಂಜಯ್ಯ ಬಿ ಬಸಯ್ಯ ಹೂಲಿ ಕಟ್ಟೆ.	241	ಖುಷ್ಕಿ	10	21	0	15	10	6	9	8	0	32	0	12	0	ಹೂಲಿಕಟ್ಟೆ ಗಡಿ	ಸರ್ವೆ ನಂಬರು 242—243	ದಾವಣಗೆರೆ ದಾರಿ	ಹೂಲಿಕಟ್ಟೆ ಗಡಿ
			* ಹೂಲಿಕಟ್ಟೆ.	ಪಾಂಡುರಂಗ ರಾ ಮಾಚಾರ್.	10	ಡಿಟೋ	3	9	1	10	1	39	1	0	0	4	0	0	11	171-172ನೆ ಜಮೀರ್	ಅಣಜಿ ಗಡಿ	ಅಣಜಿ ಗಡಿ	ಸರ್ವೆ ನಂ. 9–11
			ಡಿಟೋ	ನಾರಪ್ಪ ಬಿ ಕೆಂಚಪ್ಪ ನಾರಪ್ಪನ.	171	ಡಿಟೋ	5	26	0	1	5	25	5	8	1	0	0	15	0	170ನೆ ಜಮೀರ್	10ನೆ ಜಮೀರ್	ಅಣಜಿ ಮತ್ತು ದ್ಯಾಮವ್ವನಹಳ್ಳಿ ಗಡಿ	172ನೆ ಜಮೀರ್
			ಡಿಟೋ	ಡಿಟೋ ...	172	ಡಿಟೋ	4	12	0	2	4	10	4	0	0	1	0	0	5	ಡಿಟೋ	ಡಿಟೋ	171ನೆ ಜಮೀರ್	173 & 9ನೆ ಜಮೀರ್
															1	37	1	12	4				

* ಪರಾ—ಇನಾಂ ಗ್ರಾಮ.

ತಾರೀಖು 6ನೆ ಸೆಪ್ಟೆಂಬರ್ 1909.

ನಂ. 2251—ಎಜ್ಯು. 58-09-2, ಸ್ರ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಸ್ಟೂಡೆಂಟ್ಸ್ ಹೋಮಿಗಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೊಬಳಿ.	ಗ್ರಾಮ.	ಖಾತೇದಾರನ ಯಾ ಸೂಪೇಕ್ಷನ ಹೆಸರು.	ಸರ್ವೆ ಯಾ ನಮ್ಮ ನಿಸರ್ಗ ನಂಬರ್.	ಮನೆ ಮತ್ತು ಖಾಲಿ ಜಾಗದ ನಿವೇಶನ ಸಹ.	ಒಟ್ಟು ವಿಸ್ತೀರ್ಣ.	ಪರಾಮು.	ಕಂದಾಯ.	ಈಗ ಸರ್ಕಾರಕ್ಕೆ ಪಾವತಿ ಆಗಿರುವ ಕಂದಾಯ.	ಕಂದಾಯ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕಡೂರು	ಚಿಕ್ಕಮಗಳೂರು	ಕಸಬಾ	ಚಿಕ್ಕಮಗಳೂರು ಟೌನ್	ಮೈಸೂರು ನೀಲಗಿರಿ ವಾಹಪಂಟಾನವರ ಹೊಂಚಿತಿ ನೀಲಗಿರಿ ತಿನ್ಸುಲನವರು	ರಿಜೈಸು ಖಾನೇಷುಮಾರಿ ನಂ. 1306	ಮನೆ, ಗಾಡಿಖಾನೆ, ಖಾಲಿಜಾಗಾ ಸಹಾ	1 ಎ. 39 ಗುಂ. ಇದರಲ್ಲಿ ಮನೆ ಗಾಡಿ ಖಾನೆ ಕಾಂಪೌಂಡು ಯಲ್ಲಿ ಸೇರಿರುತ್ತೆ.	ಖರಾಬು	10 ರೂಪಾಯಿ	1 ಎಕರೆ 39 ಗುಂಟೆ	10 ರೂಪಾಯಿ ಮನೆ ಕಂದಾಯ	ಸರ್ಕಾರಿ ಜಮೀನುಗಳು ಬಿಲ್ಲು	ಚಿಕ್ಕಮಗಳೂರಿಂದ ಬೇಲೂರಿಗೆ ಹೋಗುವ ರಸ್ತೆ.	ಮಿ॥ ನಾಗಳ ರಾಮಚಂದ್ರರಾಯರ ಬಾಬತು 1307ನೆ ನಂಬರು ಮನೆಯ ಕಾಂಪೌಂಡು	ಬೆಲ್ಲಿನಂದ ರೋಡಿಗೆ ಸೇರುವ ಸೀಳುದಾರಿ

ತಾರೀಖು 25ನೆ ಆಗಸ್ಟ್ 1909.

ನಂ. ರೆ. 1782—ಫಾರೆಸ್ಟ್ಸ್. 78-07-5, ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ತಾಲ್ಲೂಕು ನರಸಿಂಹದೇವರ ಚಿಟ್ಟದ ಮನ್ನಾಜಂಗಲಿಯ 4ನೆ ತಾಕಿನ ಇದರಡಿ ಕಂಡ ಪುನರ್ವಿಮರ್ಶೆಯಾದ ಸರಹದ್ದನ್ನು ಸಮಸ್ತರ ತಿಳುವಳಿಕೆ ಬಗ್ಯೆ ಪ್ರಕಟಿಸಿ ಇರುತ್ತದೆ.

ವಿಸ್ತೀರ್ಣ—13,768 ಎಕರೆಗಳು, 8 ಗುಂಟೆಗಳು.

ಸರಹದ್ದಿನ ವಿವರಣೆ.

ಉತ್ತರಕ್ಕೆ—ಸರಹದ್ದು ಲೈನು ತೂಕಂತಹಳ್ಳಿಯ ಸರ್ವೆ 6ನೆ ನಂಬರಿನಲ್ಲಿರುವ ಸುಬೇದಾರ ಕುಂಟೆಯ ನೈರುತ್ಯ ಮೂಲೆಯಿಂದ ಹೊರಟು ಪೂರ್ವಾಭಿಮುಖವಾಗಿ ತೂಕಂತಹಳ್ಳಿಯ ಸರ್ವೆ 6 ಮತ್ತು 7ನೆ ನಂಬರುಗಳ ಮೇಲೆ ಹಾದು, ಯರಕುಂತಹಳ್ಳಿಯ ಸರ್ವೆ 5ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಸುಮಾರು 4 ಫರಲಾಂಗು ಮತ್ತು 2 ಸರಪಣಿಗಳ ದೂರದವರೆಗೆ ಯರಕುಂತಹಳ್ಳಿಯ ಸರ್ವೆ 5ನೆ ನಂಬರಿನ ದಕ್ಷಿಣಕಡೆ ಹೊರಟು, ಅಲ್ಲಿಂದಾ ದಕ್ಷಿಣಾಭಿಮುಖವಾಗಿ ಗುಡಿಸಿಹಳ್ಳಿಯ ಸರ್ವೆ 17ನೆ ನಂಬರಿನ ಮೇಲೆ ಹೋಗಿ ಗುಡಿಸಿಹಳ್ಳಿಯ ಸರ್ವೆ 22ನೆ ನಂಬರಿನ ವಾಯವ್ಯ ಮೂಲೆಯಿಂದ ಸುಮಾರು 2 ಸರಪಣಿದೂರದಲ್ಲಿ ಬಂದು ಸ್ಥಾನವನ್ನು ಮುಟ್ಟುತ್ತದೆ; ನಂತರ ನೈರುತ್ಯಾಭಿಮುಖವಾಗಿ ಸರ್ವೆ 17ನೆ ನಂಬರಿನ ಮೇಲೆ ಹೊರಟು, ಗುಡಿಸಿಹಳ್ಳಿಯ 16ನೆ ಸರ್ವೆ ನಂಬರಿನ ಪಶ್ಚಿಮ ಮೂಲೆಯನ್ನು ಬಂದು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಸರ್ವೆ 16 ಮತ್ತು 15ನೆ ನಂಬರುಗಳ ನೈರುತ್ಯ ಕಡೆ ಹೋಗಿ, ಗುಡಿಸಿಹಳ್ಳಿಯ 14ನೆ ಸರ್ವೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ; ನಂತರ ದಕ್ಷಿಣಾಭಿಮುಖವಾಗಿ ಅದೇ ಗ್ರಾಮದ ಸರ್ವೆ 14ನೆ ನಂಬರಿನ ಪಶ್ಚಿಮಕಡೆ ಹೊರಡುತ್ತದೆ; ನಂತರ ದಕ್ಷಿಣ ಮತ್ತು ನೈರುತ್ಯಾಭಿಮುಖವಾಗಿ ಯಾಡಾರ್ಲಹಳ್ಳಿ ಜೋಡಿ ಗ್ರಾಮದ ಸರಹದ್ದಿನ ವಾಯವ್ಯ ಕಡೆಯಲ್ಲಿ ಹೋಗಿ ನಾಲಕದೂರೇನಹಳ್ಳಿ ಗ್ರಾಮದ ಸರ್ವೆ 44ನೆ ನಂಬರಿನ ಉತ್ತರ ಮೂಲೆಯನ್ನು ಸೇರುತ್ತದೆ; ನಂತರ ಸರ್ವೆ 6ನೆ ನಂಬರಿನ ಪಶ್ಚಿಮ ಕಡೆಯಲ್ಲಿ ಹೊರಟು ಮೇಲ್ಕಂಡ ಗ್ರಾಮದ ಸರ್ವೆ 12ನೆ ನಂಬರಿನ ಉತ್ತರ ಮೂಲೆಯನ್ನು ಸೇರುತ್ತದೆ; ನಂತರ ನೈರುತ್ಯಾಭಿಮುಖವಾಗಿ ಸರ್ವೆ 6 ಮತ್ತು 20ನೆ ನಂಬರುಗಳಲ್ಲಿ ಹೊರಟು ಸರ್ವೆ 19ನೆ ನಂಬರಿನ ಪಶ್ಚಿಮ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಸರ್ವೆ 23ನೆ ನಂಬರಿನ ಮೇಲೆ ಸುಮಾರು 5 ಫರಲಾಂಗುದೂರ ಹೋಗಿ ನಂತರ ಈಶಾನ್ಯಾಭಿಮುಖವಾಗಿ ಅದೇ ಸರ್ವೆ ನಂಬರಿನ ಮೇಲೆ ಹೋಗಿ ಸರ್ವೆ 43ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಸರ್ವೆ 23, 29, 28 ಮತ್ತು 27ನೆ ನಂಬರುಗಳ ಮೇಲೆ ಹೋಗಿ ಮೇಲ್ಕಂಡ ಗ್ರಾಮದ ಸರ್ವೆ 27ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಸುಮಾರು $1\frac{1}{2}$ ಸರಪಣಿದೂರ ಅದೇ ಗ್ರಾಮದ ಸರ್ವೆ 26ನೆ ನಂಬರಿನ ಮೇಲೆ ಹೋಗಿ ನಂತರ ಈಶಾನ್ಯಾಭಿಮುಖವಾಗಿ ಅದೇ ಗ್ರಾಮದ ಸರ್ವೆ 24ನೆ ನಂಬರಿನ ಮೇಲೆ ಹೋಗಿ, ನಲ್ಲಕದರೇನಹಳ್ಳಿ, ಜೋಳಿದರಾಸಿ ಮತ್ತು ಜೋಡಿ ಯಡಾರ್ಲಹಳ್ಳಿ ಗ್ರಾಮಗಳ ಮುಕ್ಕುಪ್ಪೆ ಬಾಂದುಗಳನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿಯೂ ಈಶಾನ್ಯಾಭಿಮುಖವಾಗಿಯೂ ಜೋಡಿ ಯಡಾರ್ಲಹಳ್ಳಿ ಗ್ರಾಮದ ದಕ್ಷಿಣಕಡೆಯಲ್ಲಿ ಹೊರಟು ನಲ್ಲಪ್ಪನಹಳ್ಳಿ ಗ್ರಾಮದ ನೈರುತ್ಯದ ಮೂಲೆಯನ್ನು ಸೇರತ್ತದೆ; ನಂತರ ಕಡೇ ಗ್ರಾಮದ ದಕ್ಷಿಣಕಡೆಯಲ್ಲಿ

ಸುಮಾರು ಬಂದು ಫರಲಾಂಗುದೂರ ಹೋಗಿ, ನಂತರ ಆಗ್ನೇಯಾಭಿಮುಖವಾಗಿ ಕಾಚಕರಿತ ಗ್ರಾಮದ ಸರ್ವೆ 64ನೆ ನಂಬರಿನ ಮೇಲೆ ಹೋಗಿ ಸರ್ವೆ 63ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಕಾಚಕರಿತ ಗ್ರಾಮದ ಸರ್ವೆ 63, 62 ಮತ್ತು 61ನೆ ಸರ್ವೆ ನಂಬರುಗಳ ಮತ್ತು ಅಡಗಲ್ಲು ಗ್ರಾಮದ ಸರ್ವೆ 2 ಮತ್ತು 104ನೆ ನಂಬರು ಗಳ ದಕ್ಷಿಣಕಡೆಯಲ್ಲಿ ಹೊರಟು ಕಡೆಯಲ್ಲಿ ಹೇಳಿದ ಗ್ರಾಮದ 104ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯಾಭಿಮುಖವಾಗಿ ಬಿಷಗರಹಳ್ಳಿಯ ಸರ್ವೆ 19ನೆ ನಂಬರಿನ ಪಶ್ಚಿಮಕಡೆಯಲ್ಲಿ ಹೊರಟು ಅದ ರ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯವಾಗಿಯೂ ನೈರುತ್ಯವಾಗಿಯೂ ಕರಿಗಾನಹಳ್ಳಿಯ ಸರ್ವೆ 57ನೆ ನಂ ಬರ ಮೇಲೆ ಹೋಗಿ ಗೊಲ್ಲದೊಡ್ಡಿಯ ಉತ್ತರ ಮೂಲೆಯನ್ನು ಸೇರುತ್ತದೆ; ನಂತರ ನೈರುತ್ಯ ಮತ್ತು ವಾಯವ್ಯಾಭಿಮುಖವಾ ಗಿ ಗೊಲ್ಲದೊಡ್ಡಿಯ ಉತ್ತರ ಗಡಿಯಲ್ಲಿ ಹೊರಟು ಆ ಗ್ರಾಮದ ವಾಯವ್ಯಮೂಲೆಯನ್ನು ಸೇರುತ್ತದೆ; ನಂತರ ದಕ್ಷಿಣಾಭಿಮು ಖವಾಗಿ ಗೊಲ್ಲದೊಡ್ಡಿಯ ಪಶ್ಚಿಮ ಕಡೆಯಲ್ಲಿ ಹೊರಟು ಕೊನೇಲಿ ಹೇಳಿದ ಜೋಡಿ ಗ್ರಾಮದ ನೈರುತ್ಯ ಮೂಲೆಯನ್ನು ಸೇರು ತ್ತದೆ; ನಂತರ ನೈರುತ್ಯ ಮತ್ತು ಪಶ್ಚಿಮಾಭಿಮುಖವಾಗಿ ಮೂರಪ್ಪನಹಳ್ಳಿಯ ಸರ್ವೆ 8, 78 ಮತ್ತು 8ನೆ ನಂಬರುಗಳ ಮೇ ಲ್ಲೂ ಮತ್ತು ಕೇತೇನಹಳ್ಳಿಯ 96ನೆ ನಂಬರಿನ ಮೇಲೂ ಹೋಗಿ ನರಸಿಂಹದೇವರ ಬೆಟ್ಟದ ಜಂಗಲಿ 3ನೆ ತಾಕಿನ ಈಶಾನ್ಯ ಮೂ ಲೆಯನ್ನು ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಮನ್ನಾಜಂಗಲಿ 3ನೆ ತಾಕಿನ ಉತ್ತರಕಡೆಯಲ್ಲಿ ಹೊರಟು, ದಂಡಿಗಾನಹಳ್ಳಿಯ ಸರ್ವೆ 12ನೆ ನಂಬರಿನ ನೈರುತ್ಯ ಮೂಲೆಯಿಂದ ಸುಮಾರು 3 ಫರಲಾಂಗು ಮತ್ತು 5 ಸರಪಣಿಗಳ ಫಾಸಲೆಯಲ್ಲಿರುವ ನಲ್ಲೂದ ಉತ್ತರಕಡೆಯ ಬಂದು ಸ್ಥಾನವನ್ನು ಬಂದು ಸೇರುತ್ತದೆ; ನಂತರ ವಾಯವ್ಯಾಭಿಮುಖವಾಗಿ ಸರ್ವೆ 12 ಮತ್ತು 30ನೆ ನಂಬರುಗಳ ಮೇಲೆ ಹೋಗಿ ಕೊನೆಯ ಗ್ರಾಮದ 47ನೆ ಸರ್ವೆ ನಂಬರಿನ ಉತ್ತರ ಮೂಲೆಯನ್ನು ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಉತ್ತರಾಭಿಮುಖವಾಗಿ ದಂಡಿಗಾನಹಳ್ಳಿಯ 30ನೆ ನಂಬರಿನ ಮೇಲೆಯೂ ಮತ್ತು ಮಿಣಕನ ಗುರ್ಕಿ ಗ್ರಾಮದ 30ನೆ ಸರ್ವೆ ನಂಬರಿನ ಮೇಲೆಯೂ ಬಂದು ಫರಲಾಂಗು ಮತ್ತು 5 ಸರಪಣಿಗಳ ವರಿಗೂ ಹೋಗುತ್ತದೆ; ನಂತರ ವಾ ಯವ್ಯಾಭಿಮುಖವಾಗಿ ಕಡೆ ಸರ್ವೆ ನಂಬರಿನ ಮೇಲೆ 5 ಸರಪಣಿಗಳದೂರದ ವರಿಗೆ ಹೋಗುತ್ತದೆ; ನಂತರ ಈಶಾನ್ಯಾಭಿಮುಖ ವಾಗಿ ಮಿಣಕನಗುರ್ಕಿ ಗ್ರಾಮದ ಸರ್ವೆ 212 ಮತ್ತು 211ನೆ ನಂಬರುಗಳ ಮೇಲೆ 6 ಫರಲಾಂಗುಗಳದೂರದ ವರಿಗೂ ಹೋಗು ತ್ತದೆ; ನಂತರ ಪಶ್ಚಿಮಾಭಿಮುಖವಾಗಿಯೂ ಮತ್ತು ಈಶಾನ್ಯಾಭಿಮುಖವಾಗಿಯೂ ಅದೇ ಗ್ರಾಮದ 211ನೆ ಸರ್ವೆ ನಂಬರಿನ ಮೇಲೆ ಸುಮಾರು 5 ಫರಲಾಂಗುದೂರದ ವರಿಗೆ ಉಭಯ ಕಡೆಯಲ್ಲಿಯೂ ಹೋಗಿ ಪಿಡಚನಹಳ್ಳಿಯ ಸರ್ವೆ 28ನೆ ನಂಬರಿನ ಆ ಗ್ನೇಯ ಮೂಲೆಯಿಂದ ಸುಮಾರು ಬಂದು ಫರಲಾಂಗು ಮತ್ತು 5 ಸರಪಣಿಗಳ ಫಾಸಲೆಯಲ್ಲಿರುವ ಪಿಡಚನಹಳ್ಳಿಯ ಸರ್ವೆ 29ನೆ ನಂಬರಿನ ದಕ್ಷಿಣ ಗಡಿಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಸರ್ವೆ 29ನೆ ನಂಬರ ಮೇಲೆ ಹೊರಟು ಪಿ ಡಚನಹಳ್ಳಿಯ 29ನೆ ಸರ್ವೆ ನಂಬರಿನ ವಾಯವ್ಯ ಮೂಲೆಯಿಂದ ಸುಮಾರು 3 ಫರಲಾಂಗು ಮತ್ತು 7 ಸರಪಣಿಗಳ ದೂರದಲ್ಲಿ ರುವ ತಾಕಲಹಳ್ಳಿಯ ಸರ್ವೆ 50ನೆ ನಂಬರಿನ ದಕ್ಷಿಣ ಗಡಿಯಲ್ಲಿನ ಬಂದು ಸ್ಥಾನವನ್ನು ಸೇರುತ್ತದೆ; ನಂತರ ವಾಯವ್ಯಾಭಿಮು ಖವಾಗಿ ತಾಕಲಹಳ್ಳಿಯ ಸರ್ವೆ 50 ಮತ್ತು 45ನೆ ನಂಬರುಗಳ ಮೇಲೆ ಹೋಗಿ ಅದೇ ಗ್ರಾಮದ ಸರ್ವೆ 46ನೆ ನಂಬರಿನ ಈಶಾ ನ್ಯ ಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಅದೇ ಗ್ರಾಮದ ಸರ್ವೆ 44ನೆ ನಂಬರಿನ ಮೇಲೆ ಹೋಗಿ ನಾವುಗೊಂಡ್ಲ ಗ್ರಾಮದ ಸರ್ವೆ 110ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ವಾಯವ್ಯಾಭಿಮುಖವಾಗಿ ನಾವುಗೊಂಡ್ಲ ಗ್ರಾಮದ ಸರ್ವೆ 110ನೆ ನಂಬರಿನ ಪೂರ್ವಗಡಿಯ ಮೇಲೆ ಹೋಗಿ ಕೊಲ್ಲಿಹಳ್ಳಿಯ ಸರ್ವೆ 3ನೆ ನಂಬರಿನ ಆ ಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಕೊಲ್ಲಿಹಳ್ಳಿಯ ಸರ್ವೆ 3 ಮತ್ತು 2ನೆ ನಂಬರು ಮ ತ್ತು ಐವನಕೆರೆಯ ಪೂರ್ವಗಡಿ ಪೂರ್ವ ಕಡೆಯಲ್ಲಿ ಹೊರಟು ಐವನಕೆರೆ, ತಾಕಂತಹಳ್ಳಿ ಮತ್ತು ನಲಕಾರನಹಳ್ಳಿಯ ಮು ಕ್ಕುಪ್ಪೆ ಬಾಂದುಗಳನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ತಾಕಂತಹಳ್ಳಿಯ ಸರ್ವೆ 6ನೆ ನಂಬರಿನ ಮೇಲೆ ಹೋಗಿ ಮೊದಲು ಹೊರಟ ಸ್ಥಾನವನ್ನು ಸೇರುತ್ತದೆ.

ಪರಾಗಳು.

A. ಇದರಡಿ ಕಂಡ ಹಕ್ಕುಗಳನ್ನು ಈ ಜಂಗಲಿಯಲ್ಲಿ ಅಂಗೀಕರಿಸಿರುತ್ತದೆ.

(1) ದಾರಿಯ ಹಕ್ಕು—20 ಗಜ ಅಗಲ, ಕೇತೇನಹಳ್ಳಿಯ ಸರ್ವೆ 7ನೆ ನಂಬರಿನ ಮೇಲೆ ಹೋಗಿ 7ನೆ ನಂಬರಿನಲ್ಲಿ ರುವ ಜಂಬುಹಳ್ಳವನ್ನು ಮುಟ್ಟುತ್ತದೆ. ದುರ್ಭಿಕ್ಷ ಕಾಲದಲ್ಲಿ ನೀರಿಗಾಗಿ ರಾಸುಗಳನ್ನು ಈ ಹಳ್ಳಿಕ್ಕೆ ತೆಗದುಕೊಂಡು ಹೋಗ ಬಹುದು.

(2) ದಾರಿಯ ಹಕ್ಕು—20 ಗಜ ಅಗಲ, ಸಾದೇನಹಳ್ಳಿ ರೈತರು ಸರ್ವೆ 45ನೆ ನಂಬರಾಗಿರುವ ಕೆರೆಯಲ್ಲಿ ತಮ್ಮ ರಾಸುಗಳಿಗೆ ನೀರನ್ನು ಕುಡಿಸಬಹುದು. ಈ ಕೆರೆಯನ್ನು ರೈತರು ದುರಸ್ತಿನಲ್ಲಿ ಇಟ್ಟುಕೊಳ್ಳಬೇಕು.

(3) ಭಂಡಿದಾರಿ—ಗದ್ದವಗಾನಹಳ್ಳಿಯಿಂದ ಯರ್ರಮಾರೇನಹಳ್ಳಿಗೆ ಹೋಗುತ್ತೆ. ಜನಗಳ, ರಾಸುಗಳ ಮತ್ತು ಭಂ ಡಿಗಳ ಸಂಚಾರಕ್ಕೆ ಖುಲ್ಲಾ ಇರುತ್ತೆ. ತೇಕಲಹಳ್ಳಿಯ ಸರ್ವೆ 45ನೆ ನಂಬರಿನಲ್ಲಿಯೂ ಯರ್ರಮಾರೇನಹಳ್ಳಿಯ ಸರ್ವೆ 31ನೆ ನಂಬ ರಿನಲ್ಲಿಯೂ ದಾರಿ ಹೋಗುತ್ತೆ.

(4) ಯಡರಹಳ್ಳಿಯಿಂದ ಕೊತ್ತೂರಿಗೆ ಆನೆಮಡಗು ಗ್ರಾಮದ ಸರ್ವೆ 74 ಮತ್ತು 73ನೆ ನಂಬರುಗಳ ಮೇಲೆ ಹೋ ಗುವ ಭಂಡಿದಾರಿ.

(5) ಮೂರಪ್ಪನಹಳ್ಳಿಯಿಂದ ಕೋಟೇನಹಳ್ಳಿಗೆ, ಸಾದೇನಹಳ್ಳಿಯ ಸರ್ವೆ 17 ಮತ್ತು 15ನೆ ನಂಬರುಗಳ ಮೇಲೆ ಯೂ ಕೇತೇನಹಳ್ಳಿಯ ಸರ್ವೆ 20ನೆ ನಂಬರಿನ ಮೇಲೆಯೂ ಹೋಗುವ ಭಂಡಿದಾರಿ, ಜನಗಳ, ರಾಸುಗಳ ಮತ್ತು ಭಂಡಿಗಳ ಉಪಯೋಗಕ್ಕೆ ಖುಲ್ಲಾ ಇರತಕ್ಕದ್ದು.

(6) ಮೇಲ್ಕಂಡ ದಾರಿ ಸಾದೇನಹಳ್ಳಿ ಸರ್ವೆ 15ನೆ ನಂಬರಿನಲ್ಲಿ ಬಡದು ಆನೆಮಡಗು ಮತ್ತು ಯರ್ರಮೋರೇನಹಳ್ಳಿ ಮೇಲೆ ಬಡಿಜೇನಹಳ್ಳಿಗೆ ಹೋಗುವ ಬಂಡಿದಾರಿ.

(7) ದಂಡಿಗಾನಹಳ್ಳಿಯಿಂದ ಕೇತನಹಳ್ಳಿಗೆ ಹೋಗುವ ಕಾಲುದಾರಿ. ಜನಗಳ ಮತ್ತು ಜಾನವರುಗಳ ಉಪಯೋಗಕ್ಕೆ ಖುಲ್ಲಾ. ಈ ದಾರಿ ದಂಡಿಗಾನಹಳ್ಳಿ ಸರ್ವೆ 12ನೆ ನಂಬರಿನಲ್ಲಿಯೂ ಕೇತನಹಳ್ಳಿಯ ಸರ್ವೆ 45 ಮತ್ತು 7ನೆ ನಂಬರುಗಳಲ್ಲಿಯೂ ಹೋಗುತ್ತೆ.

(೮) ಮೇಲ್ಕಂಡ 5ನೆ ನಂಬರು ಬಂಡಿದಾರಿಯಿಂದ ಬಡದು ಕೇತನಹಳ್ಳಿಯ ಸರ್ವೆ 42ನೆ ನಂಬರಿನ ಮೇಲೆ ಹೋಗುವ ಕಾಲುದಾರಿ.

B. ಇದರಡಿ ಕಂಡ ಜಮೀನುಗಳಿನ್ನು ಈ ಜಂಗಲಿಗೆ ಆವರಣಗಳಾಗಿ ಭೂವಿಸಬೇಕು. ಇವುಗಳಲ್ಲಿ ಕಾತೇನಹಳ್ಳಿ, ಸಾದೇನಹಳ್ಳಿ, ಆನೆಮಡಗು ಮತ್ತು ಯರ್ರಮೋರೇನಹಳ್ಳಿ ಗ್ರಾಮಗಳ ರೈತರು ಮಾಮೂಲಿನಂತೆ ತನ್ನ ಜಾನವರುಗಳನ್ನು ಮುಕ್ತವಾಗಿ ಮೇಯಿಸಿಕೊಳ್ಳುವದಕ್ಕೂ ಮತ್ತು ಮನೆ ಕೆಲಸಗಳಿಗಾಗಿ ಸೌದೆ ಮತ್ತು ಮರಸಾಮಾನುಗಳನ್ನು ತೆಗದುಕೊಂಡು ಹೋಗುವದಕ್ಕೂ ಹಕ್ಕುಳ್ಳವರಾಗಿರುತ್ತಾರೆ.

ಕೇತೇನಹಳ್ಳಿ.

ಖರಾಬು ಸರ್ವೆ ನಂಬರ್‌ಗಳು 10, 36, 40, 52, 72, 75, 81, 101ರ ಭಾಗ, 117, 145ರಲ್ಲಿ ಬಂದು ಭಾಗ, 152, 180.

ಗೋಮಾಳ ಸರ್ವೆ ನಂಬರುಗಳು 6, 25, 34, 42ರಲ್ಲಿ ಬಂದು ಭಾಗ, 50, 54, 87, 96ರಲ್ಲಿ ಬಂದು ಭಾಗ, 102, 104, 110, 142, 151, 158, 159, 160 ಮತ್ತು 189 ಮತ್ತು ಗ್ರಾಮದ ಹಿಡುವಳಿಯಲ್ಲಿ ಇರುವ ಮತ್ತು ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಎಲ್ಲಾ ಜಮೀನುಗಳು.

ಆನೆಮಡಗು.

ಖರಾಬು ಸರ್ವೆ ನಂಬರು 3, 82, 93, 113ರಲ್ಲಿ ಬಂದು ಭಾಗ.

ಗೋಮಾಳ, 5, 6, 20, 31, (ಬಂದು ಭಾಗ), 61, 73 (ಬಂದು ಭಾಗ) ಮತ್ತು ಹಿಡುವಳಿಯಲ್ಲಿರುವ ಮತ್ತು ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಗ್ರಾಮದ ಎಲ್ಲಾ ಜಮೀನುಗಳು.

ಸಾದೇನಹಳ್ಳಿ.

ಖರಾಬು ನಂಬರು 15, 3, 11, 18, 21, 17.

ಗೋಮಾಳ ನಂಬರು 26 ಮತ್ತು ಗ್ರಾಮದ ಆಕಾರ ಕಂಡ ಹಿಡುವಳಿಯಲ್ಲಿ ಇರುವ ಮತ್ತು ಹಿಡುವಳಿಯಲ್ಲಿ ಇಲ್ಲದ ತಮಾಂ ಜಮೀನುಗಳು.

ಯರ್ರಮೋರೇನಹಳ್ಳಿ.

ಖರಾಬು 29 (ಭಾಗ), 30, 41, 45, 47, 61, 106, 108 (ಭಾಗ).

ಗೋಮಾಳ 7, 17 (ಭಾಗ) 63, 84 ಮತ್ತು 133 ಮತ್ತು ಗ್ರಾಮದ ಆಕಾರ ಕಂಡ ಹಿಡುವಳಿಯಲ್ಲಿ ಇರುವ ಮತ್ತು ಹಿಡುವಳಿಯಲ್ಲಿ ಇಲ್ಲದ ತಮಾಂ ಜಮೀನುಗಳು.

ತಾರೀಖು 26ನೆ ಆಗಸ್ಟು 1909.

ನಂ. ರೆ. 1786—ಫಾ. 12-09-4, ಸ್ಟ 1909ನ ಜುಲೈ 24ನೆ ಮಕ್ಕಂ ರೆ. 771—ಫಾ. 12-09-2ನೆ ನಂಬರ ಇಸ್ತಿಹಾರ್ನಾವೆಯಿಂದ ಕೊಡೋಣವಾದ 15 ದಿವಸಗಳ ಪ್ರಿವಿಲೇಜ್ ರಜಾವನ್ನು ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕನ್‌ಸರ್‌ವೇಟರ್ ಮಿ|| ಟಿ. ಅಬ್ದುಲ್‌ಕರೀಂರವರು 1909ನೆ ಆಗಸ್ಟು 2ನೆ ತಾರೀಖು ಪೂರ್ವಾಹ್ನದ ಲಾಗಾಯಿತು ಉಪಯೋಗಿಸಿಕೊಂಡು ಅದೇ ಮಾಹೆ 13ನೆ ತಾರೀಖಿನ ಮಧ್ಯಾಹ್ನದವೇಲೆ ಕೆಲಸದವೇಲೆ ಹಾಜರಾಗಿರುವುದರಿಂದ ಅವರು ಉಪಯೋಗಿಸಿಕೊಳ್ಳದೆ ನಿಂತಿರುವ 4½ ದಿವಸಗಳ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 26ನೆ ಆಗಸ್ಟು 1909.

ನಂ. ರೆ. 1791—ಲ್ಯಾ. ರೆ. 65-09-5, ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ|| ಎಂ. ಎ. ನಾರಾಯಣಯ್ಯಂಗಾರ್, ಬಿ.ಎ.,ಬಿ.ಎಲ್. ಯವರಿಗೆ 1909ನೆ ಆಗಸ್ಟು 7ನೆ ಮಕ್ಕಂ ರೆ. 1219—ಲ್ಯಾ. ರೆ. 65-09-2ನೆ ನಂಬರು ಇಸ್ತಿಹಾರ್ನಾವೆಯಲ್ಲಿ ಕೊಟ್ಟ 14 ದಿವಸಗಳ ಪ್ರಿವಿಲೇಜ್ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 27ನೆ ಆಗಸ್ಟು 1909.

ನಂ. ರೆ. 1853—ಲ್ಯಾ. ರೆ. 96-09-2, ಚಾಮರಾಜನಗರ ತಾಲ್ಲೂಕು ಅಮಲ್ದಾರ್ ಮಿ|| ಎಸ್. ವೆಂಕಟರಮಣ ಶಾಸ್ತ್ರಿ ಬಿ.ಎ. ಯವರಿಗೆ ವರುಅಲುಪ ಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇರುತ್ತದೆ.

2. ಸದರೀಯವರು ರಜಾಮೇಲೆ ಇರುವಾಗ ಅಥವಾ ಬೇರೆ ಹುಕುಂ ಕೊಡುವ ವರೆಗೆ ಮೈಸೂರು ಡಿಸ್ಟ್ರಿಕ್ಟ್ ಆಫೀಸ್ (ಜುಡಿಷಿಯಲ್ ಹೆಡ್ ಮ್ಯುಷಿ ಮಿ|| ಎಸ್. ಶ್ರೀನಿವಾಸಯ್ಯಂಗಾರ್, ಬಿ.ಎ. ಯವರನ್ನು ಚಾಮರಾಜನಗರ ತಾಲ್ಲೂಕು ಅಮಲ್ದಾರ್ ಮತ್ತು 3ನೆ ತರಗತಿ ಮೇಜಿಸ್ಟ್ರೇಟರನ್ನಾಗಿ ವೊಕರರ್ಮಾಡಿ ಇದೆ.

ತಾರೀಖು 28ನೆ ಆಗಸ್ಟು 1909.

ನಂ. ರೆ. 1864—ಫಾರೆಸ್ಟ್ 4-09-3, ಸ್ಯ 1900ನೆ ಇಸವಿ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನಿನ 4ನೆ ಸೆಕ್ಷನ್ನಿನ ವಿಧಿಗಳನ್ನು ಅನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರ ಸರ್ಕಾರದಿಂದ ಪ್ರಸಿದ್ಧಪಡಿಸುವದೇನಂದರೆ :—

ಇದರಡಿ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಜಕ್ಕು ಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನ್ನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟಾಗಿ ಏರ್ಪಾಡು ಆಗತಕ್ಕದ್ದೆಂದು ಯೋಚಿಸಿರುತ್ತೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬ್ಳಿ, ಗ್ರಾಮ.	ಅಂದಾಜಿ ವಿಸ್ತೀರ್ಣ.	ಬೌಂಡರಿ ಮೇರೆಗಳ ಹೆಸರು.	ಸ್ಥಳ ಜಕ್ಕು ಬಂದಿ.
ಶಿವಮೊಗ್ಗ.	ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳು.	12,522 ಎಕರೆ. ಅಥವಾ 19 ಸ್ಕ್ವೇ 362 ಎಕರೆ.	ಸೂಳೆಕೆರೆ ಬ್ಲಾಕ್.	ಚನ್ನಗಿರಿ-ಮಳೇಪನ್ನೂರು ರಸ್ತೆಯ ವಾಯವ್ಯದಲ್ಲಿರುವ ಡಿಸ್ಟ್ರಿಕ್ಟು ಜಂಗಲಿ. ಉತ್ತರಕ್ಕೆ—ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರು 9ರ ಈಶಾನ್ಯ ಮೂಲೆಯಿಂದ ಲೈನ್ ಹೊರಟು ಪೂರ್ವದಿಕ್ಕಾಗಿ 4 ಫರ್ಲಾಂಗು 3 ಸರಪಣಿಗಳು ದಾಗಿನಕಟ್ಟೆ ದಕ್ಷಿಣಗಡಿಯನ್ನು ಅನುಸರಿಸಿ ದಾಗಿನಕಟ್ಟೆ, ಬುಳ್ಳನಾಯ್ಕನಹಳ್ಳಿ, ಶೃಂಗಾರಬಾಗ್ ಮುಕ್ತಾಪ್ಪೆ ಬಾಂದಿಗೆ ಸೇರುತ್ತದೆ. ನಂತರ ಉತ್ತರದಿಕ್ಕಾಗಿ 2 ಫರ್ಲಾಂಗು 3 ಸರಪಣಿಗಳು ದಾಗಿನಕಟ್ಟೆ, ಶೃಂಗಾರಬಾಗ್, ಗಡಿಯನ್ನು ಅನುಸರಿಸಿ, ಶೃಂಗಾರಬಾಗಿನ ಸರ್ವೆ ನಂಬರು 17ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 3 ಫರ್ಲಾಂಗುಗಳು ಶೃಂಗಾರಬಾಗ್ ಸರ್ವೆ ನಂಬರು 16ರಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 25ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 1 ಫರ್ಲಾಂಗು 8 ಸರಪಣಿಗಳು ಸದರಿ ಗ್ರಾಮದ ಸರ್ವೆ ನಂಬರು 16ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 24ರ ನೈರುತ್ಯಮೂಲೆಗೆ ಸೇರುತ್ತದೆ. ಪುನಃ ಅದೇ ದಿಕ್ಕಾಗಿ 4 ಫರ್ಲಾಂಗು 5 ಸರಪಣಿಗಳು ಸದರಿ ಸರ್ವೆ ನಂಬರು 16ರಲ್ಲಿ ಹಾದು, ಸರ್ವೆ ನಂಬರು 31ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 2 ಫರ್ಲಾಂಗು 7 ಸರಪಣಿಗಳು ಶೃಂಗಾರಬಾಗ್ ಸರ್ವೆ ನಂಬರು 16-15ರಲ್ಲಿ ಹಾದು, ವೈಲಪುರದ ಸರ್ವೆ ನಂಬರು 35ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಮೈಲಿ 1 ಫರ್ಲಾಂಗು 5 ಸರಪಣಿಗಳು ವೈಲಪುರದ ಸರ್ವೆ ನಂಬರು 28ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 26ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 3 ಫರ್ಲಾಂಗು 5 ಸರಪಣಿಗಳು, ಸದರಿ ಗ್ರಾಮದ ಸರ್ವೆ ನಂಬರು 25ರ ಪಶ್ಚಿಮಗಡಿಯನ್ನು ಅನುಸರಿಸಿ ವೈಲಿಪುರ, ಬನಕನಹಳ್ಳಿ, ಮೊಹರ್ದಿಪುರ ಕಾವಲ್ ಗ್ರಾಮಗಳ ಮುಕ್ತಾಪ್ಪೆ ಬಾಂದಿಗೆ ಸೇರುತ್ತದೆ. ನಂತರ ಈಶಾನ್ಯವಾಗಿ 6 ಫರ್ಲಾಂಗು 3 ಸರಪಣಿಗಳು ವೈಲಿಪುರ ಸರ್ವೆ ನಂಬರು 25ರ ದಕ್ಷಿಣಗಡಿಯನ್ನು ಅನುಸರಿಸಿ ವೈಲಿಪುರ, ಮೊಹರ್ದಿಪುರ, ಹೊಸಹಳ್ಳಿ, ಗ್ರಾಮಗಳ ಮುಕ್ತಾಪ್ಪೆ ಬಾಂದಿಗೆ ಸೇರುತ್ತದೆ. ಪೂರ್ವಕ್ಕೆ—ಅಲ್ಲಿಂದ ಲೈನ್ ಹೊರಟು ಆಗ್ನೇಯವಾಗಿ 3 ಫರ್ಲಾಂಗು 3 ಸರಪಣಿಗಳು ದಕ್ಷಿಣವಾಗಿ 3 ಫರ್ಲಾಂಗು 2 ಸರಪಣಿಗಳು ಪುನಃ ಆಗ್ನೇಯವಾಗಿ 1 ಮೈಲಿ, 7 ಫರ್ಲಾಂಗು ಸೂಳೆಕೆರೆಯ ಪಶ್ಚಿಮಗಡಿಯನ್ನು ಅನುಸರಿಸಿ ಮೊಹರ್ದಿಪುರ ಕಾವಲ್, ರುದ್ರಪುರ ಕಾವಲ್, ಮತ್ತು ಸೂಳೆಕೆರೆ ಗ್ರಾಮಗಳ ಮುಕ್ತಾಪ್ಪೆ ಬಾಂದಿಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 6 ಫರ್ಲಾಂಗು ಸೂಳೆಕೆರೆ ಪಶ್ಚಿಮಗಡಿಯನ್ನು ಅನುಸರಿಸಿಯೂ, ನೈರುತ್ಯವಾಗಿ 4 ಫರ್ಲಾಂಗು ದಕ್ಷಿಣವಾಗಿ 3 ಫರ್ಲಾಂಗು ಅರಕಿನಗಟ್ಟ ಗ್ರಾಮದ ಉತ್ತರ ಮತ್ತು ಪಶ್ಚಿಮಗಡಿಯನ್ನು ಅನುಸರಿಸಿ ಅರಕಿನಗಟ್ಟ, ರುದ್ರಾಪುರ ಕಾವಲ್, ಸಿದ್ದಾಪುರ ಗ್ರಾಮಗಳ ಮುಕ್ತಾಪ್ಪೆ ಬಾಂದಿಗೆ ಸೇರುತ್ತದೆ. ನಂತರ ಪೂರ್ವವಾಗಿ 2 ಫರ್ಲಾಂಗು 5 ಸರಪಣಿಗಳು ಅರ್ಕಿನಗಟ್ಟ ಗ್ರಾಮದ ದಕ್ಷಿಣ ಗಡಿಯನ್ನು ಅನುಸರಿಸಿ, ಸಿದ್ದಾಪುರ, ಅರಕಿನಗಟ್ಟ, ಸೋಮಶೆಟ್ಟಿಹಳ್ಳಿ ಗ್ರಾಮಗಳ ಮುಕ್ತಾಪ್ಪೆ ಬಾಂದಿಗೆ ಸೇರುತ್ತದೆ. ಅಲ್ಲಿಂದ ನೈರುತ್ಯ ಮತ್ತು ಆಗ್ನೇಯವಾಗಿ ಸುಮಾರು 1 ಮೈಲಿ 2 ಫರ್ಲಾಂಗುಗಳು ಸೋಮಶೆಟ್ಟಿಹಳ್ಳಿ ಪಶ್ಚಿಮಗಡಿಯನ್ನು ಅನುಸರಿಸಿ, ಸಿದ್ದಾಪುರ, ಸೋಮಶೆಟ್ಟಿಹಳ್ಳಿ, ಲಿಂಗದಹಳ್ಳಿ ಗ್ರಾಮಗಳ ಮುಕ್ತಾಪ್ಪೆ ಬಾಂದಿನ (ವಾಯವ್ಯ 26 ಸರಪಣಿಗಳ ದೂರದಲ್ಲಿ ಸಿದ್ದಾಪುರ ಸೋಮಶೆಟ್ಟಿಹಳ್ಳಿ ಗಡಿಯಲ್ಲಿನ ಬಂದು ಕೋಣಕ್ಕೆ ಸೇರುತ್ತದೆ.) ದಕ್ಷಿಣಕ್ಕೆ—ಅಲ್ಲಿಂದ ಲೈನ್ ಹೊರಟು ವಾಯವ್ಯವಾಗಿ 7 ಫರ್ಲಾಂಗು ಸಿದ್ದಾಪುರ ಸರ್ವೆ ನಂಬರು 32ರಲ್ಲಿ ಹಾದು, ಸಿದ್ದಾಪುರ, ಲಿಂಗದಹಳ್ಳಿ, ಮದರನಾಯ್ಕನಹಳ್ಳಿ, ಮುಕ್ತಾಪ್ಪೆ ಬಾಂದಿಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 1 ಮೈಲಿ ಮದರನಾಯ್ಕನಹಳ್ಳಿ ಸರ್ವೆ ನಂಬರು 16ರಲ್ಲಿ ಹಾದು, ನಂತರ ಪಶ್ಚಿಮವಾಗಿ 3 ಫರ್ಲಾಂಗು 7 ಸರಪಣಿಗಳು ನೈರುತ್ಯವಾಗಿ 3 ಫರ್ಲಾಂಗು 2 ಸರಪಣಿಗಳು ವಾಯವ್ಯವಾಗಿ 2 ಫರ್ಲಾಂಗು ಮದರನಾಯ್ಕನಹಳ್ಳಿ ಸರ್ವೆ ನಂಬರು 16ರ ಉತ್ತರ ಗಡಿಯನ್ನು ಅನುಸರಿಸಿ ಸದರಿ ನಂಬರಿನ ವಾಯವ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಕುದ್ಧಪ್ಪಿವಾಗಿ 1 ಮೈಲಿ 1 ಫರ್ಲಾಂಗು 7 ಸರಪಣಿಗಳು ಕೊಮಾರನಹಳ್ಳಿ ಸರ್ವೆ ನಂಬರು 29ರಲ್ಲಿ ಹಾದು, ಸದರಿ ಗ್ರಾಮದ 28ನೆ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 3 ಫರ್ಲಾಂಗು 7 ಸರಪಣಿಗಳು ಕೊಮಾರನಹಳ್ಳಿ ಸರ್ವೆ ನಂಬರು 28ರಲ್ಲಿ ಹಾದು, ಸರ್ವೆ ನಂಬರು 41ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 2 ಫರ್ಲಾಂಗು 5 ಸರಪಣಿಗಳು ಸದರಿ ಗ್ರಾಮದ ಸರ್ವೆ ನಂಬರುಗಳು 41,

40, 38ರ ಪಶ್ಚಿಮಗಡಿಯನ್ನನುಸರಿಸಿ, ಸರ್ವೆ ನಂಬರು 38ರ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಫರ್ಲಾಂಗು ಕೊಮಾರನಹಳ್ಳಿ ಸರ್ವೆ ನಂಬರು 37ರ ಪಶ್ಚಿಮಗಡಿಯನ್ನು ಅನುಸರಿಸಿ ಸದರಿ ನಂಬರಿನ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇದಿಕ್ಕಾಗಿ 1 ಮೈಲಿ ಕೊಮಾರನಹಳ್ಳಿ ಸರ್ವೆ ನಂಬರು 28 ಮಲ್ಲಿಗೇನಹಳ್ಳಿ ಸರ್ವೆ ನಂಬರು 16ರಲ್ಲಿ ಹಾದು, ಮಲ್ಲಿಗೇನಹಳ್ಳಿ ಸರ್ವೆ ನಂಬರು30ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರ್ಲಾಂಗು 5 ಸರಪಣಿಗಳು ಮಲ್ಲಿಗೇನಹಳ್ಳಿ ಸರ್ವೆ ನಂಬರು 16–9ಗಳಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 28ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 5 ಫರ್ಲಾಂಗು ಸದರಿ ಗ್ರಾಮದ ಸರ್ವೆ ನಂಬರು 9ರಲ್ಲಿ ಹಾದು ಗಾಣದಕಟ್ಟೆಯ ಉತ್ತರಗಡಿಯಲ್ಲಿ ಬಂದು ಕೋಣಕ್ಕೆ ಸೇರುತ್ತದೆ. ಅಲ್ಲಿಂದ ನೈರುತ್ಯವಾಗಿಯೂ, ದಕ್ಷಿಣವಾಗಿಯೂ, ಸುಮಾರು 3 ಮೈಲಿ 3 ಫರ್ಲಾಂಗು ಸೈದನಕಲ್ಲಹಳ್ಳಿ ಉತ್ತರಗಡಿಯನ್ನು ಅನುಸರಿಸಿ ತ್ಯಾಗದಕಟ್ಟೆ ಸರ್ವೆ ನಂಬರು 6ರ ಆಗ್ನೇಯಮೂಲೆಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈನ್ ಹೊರಟು ಈಶಾನ್ಯವಾಗಿ 6 ಫರಲಾಂಗು 3 ಸರಪಣಿಗಳು ತ್ಯಾಗದಕಟ್ಟೆ ಸರ್ವೆ ನಂಬರು 22ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 20ರ(ಕೆರೆ) ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಉತ್ತರವಾಗಿ 1 ಫರ್ಲಾಂಗು 8 ಸರಪಣಿಗಳು ಸದರಿ ಸರ್ವೆ ನಂಬರಿನ ಪೂರ್ವಗಡಿಯನ್ನು ಅನುಸರಿಸಿ ಸದರಿ ನಂಬರಿನ ಈಶಾನ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 4 ಫರ್ಲಾಂಗುಗಳು ಸರ್ವೆ ನಂಬರು 22ರಲ್ಲಿ ಹಾದು ಹಟ್ಟಿಹಾಳ್ ಗ್ರಾಮದ ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಪೂರ್ವ ಉತ್ತರ, ಪಶ್ಚಿಮವಾಗಿ ಸುಮಾರು 2 ಮೈಲಿ 3 ಫರ್ಲಾಂಗು ಹಟ್ಟಿಹಾಳ್ ಗ್ರಾಮದ ಸರ್ವೆ ನಂಬರು 34ರ ದಕ್ಷಿಣ, ಪೂರ್ವ ಮತ್ತು ಉತ್ತರಗಡಿಗಳನ್ನು ಅನುಸರಿಸಿ ಸದರಿ ಸರ್ವೆ ನಂಬರಿನ ವಾಯವ್ಯ ಮೂಲೆಗೆ ಪೂರ್ವಕ್ಕೆ 1 ಫರ್ಲಾಂಗು ದೂರದಲ್ಲಿರುವ ಸ್ಥಳಕ್ಕೆ ಸೇರುತ್ತದೆ. ಅಲ್ಲಿಂದ ಉತ್ತರಕ್ಕೆ 4 ಫರ್ಲಾಂಗುಗಳು ಚೀಲಾಪುರ ಸರ್ವೆ ನಂಬರು 8ರಲ್ಲಿಹಾದು ಸದರಿ ಗ್ರಾಮದ ಉತ್ತರಗಡಿಯಲ್ಲಿ ಸರ್ವೆ ನಂಬರು 10ರ ಈಶಾನ್ಯಮೂಲೆಗೆ ಪೂರ್ವಕ್ಕೆ 1 ಫರ್ಲಾಂಗು ದೂರವಿರುವ ಸ್ಥಳಕ್ಕೆ ಸೇರುತ್ತದೆ. ನಂತರ ವಾಯವ್ಯವಾಗಿ ಸುಮಾರು ಒಂದು ಮೈಲಿ ಘಾಸಲೆ ಬೈರನಹಳ್ಳಿ ಸರ್ವೆ ನಂಬರು 7ರಲ್ಲಿ ಹಾದು ಬೈರನಹಳ್ಳಿ ಸರ್ವೆ ನಂಬರು 8ರ ಈಶಾನ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಉತ್ತರವಾಗಿ 6 ಫರ್ಲಾಂಗು 8 ಸರಪಣಿಗಳು ಬೈರನಹಳ್ಳಿ ಸರ್ವೆ ನಂಬರು 7, ಚನ್ನೇನಹಳ್ಳಿ ಸರ್ವೆ ನಂಬರು 23ರಲ್ಲಿ ಹಾದು ಚನ್ನೇನಹಳ್ಳಿ, ಕುಳಗಟ್ಟೆ, ನಿಲುವಗಲ್ಲು ಮತ್ತು ಕಂಚುಗಾರನಹಳ್ಳಿ ಗ್ರಾಮಗಳ ನಾಗುಪ್ಪೆ ಬಾಂದಿಗೆ ಸೇರುತ್ತದೆ. ನಂತರ ವಾಯವ್ಯವಾಗಿ 1 ಮೈಲಿ 3 ಫರ್ಲಾಂಗು 5 ಸರಪಣಿಗಳು ಕುಳಗಟ್ಟೆ, ಕಂಚುಗಾರನಹಳ್ಳಿ ಗಡಿಯನ್ನು ಅನುಸರಿಸಿ ಕಂಚುಗಾರನಹಳ್ಳಿ ಸರ್ವೆ ನಂಬರು 44ರ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ವಾಯವ್ಯವಾಗಿ 1 ಫರ್ಲಾಂಗು 5 ಸರಪಣಿಗಳು ಕಂಚುಗಾರನಹಳ್ಳಿ ಸರ್ವೆ ನಂಬರು 44ರ ಪೂರ್ವ ಗಡಿಯನ್ನು ಅನುಸರಿಸಿ 143ರ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 7 ಫರ್ಲಾಂಗುಗಳು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಮೈಲಿ 3 ಫರ್ಲಾಂಗು 5 ಸರಪಣಿಗಳು ಕಂಚುಗಾರನಹಳ್ಳಿ ಸರ್ವೆ ನಂಬರು 36, ನಿಲುವಗಲ್ಲು ಸರ್ವೆ ನಂಬರು 15 ಇವುಗಳಲ್ಲಿ ಹಾದು ನಿಲುವಗಲ್ಲು ಸರ್ವೆ ನಂಬರು 14ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 14–13ರ ದಕ್ಷಿಣಗಡಿಯನ್ನು ಅನುಸರಿಸಿ 13ನೆ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಈಶಾನ್ಯವಾಗಿ 5 ಫರ್ಲಾಂಗು 5 ಸರಪಣಿಗಳು ನಿಲುವಗಲ್ಲು ಸರ್ವೆ ನಂಬರು 15ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 48ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 5 ಸರಪಣಿಗಳು ಸರ್ವೆ ನಂಬರು 48ರ ದಕ್ಷಿಣ ಗಡಿಯನ್ನು ಅನುಸರಿಸಿ ಸದರಿ ನಂಬರಿನ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 7 ಸರಪಣಿಗಳು ನಿಲುವಗಲ್ಲು ಸರ್ವೆ ನಂಬರು 36ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 47ರ ಆಗ್ನೇಯಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯವಾಗಿ 7 ಫರ್ಲಾಂಗು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 39ರ ಈಶಾನ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ ಸುಮಾರು 7 ಫರ್ಲಾಂಗು ನಿಲುವಗಲ್ಲು ಸರ್ವೆ ನಂಬರು 36 ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರು 11ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 19ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 3 ಫರ್ಲಾಂಗು 3 ಸರಪಣಿಗಳು ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರಿನ 11ರಲ್ಲಿ ಹಾದು, ಸದರಿ ಗ್ರಾಮದ ಸರ್ವೆ ಸರ್ವೆ ನಂಬರು 10ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಉತ್ತರವಾಗಿ 3 ಫರ್ಲಾಂಗು 3 ಸರಪಣಿಗಳು ಸರ್ವೆ ನಂಬರು 10 ಮತ್ತು 9ರ ಪೂರ್ವಗಡಿಯನ್ನು ಅನುಸರಿಸಿ ಹೊರಟು ಸ್ಥಳಕ್ಕೆ ಹೋಗಿ ಸೇರುತ್ತದೆ.

ಬೆಂಕೇನಹಳ್ಳಿ ಗ್ರಾಮದ ಇದರಡಿ ಕಂಡ ಜಮೀನುಗಳನ್ನು ಈ ಫಾರೆಸ್ಟ್ ತಾಕಿಗೆ ಆವರಣಗಳಾಗಿ ಎಣಿಸತಕ್ಕದ್ದು :—

ಸರ್ವೆ ನಂ.		ವಿಸ್ತೀರ್ಣ.		ತರಗತಿ.
1	...	26·4	...	ಖುಷ್ಕ
2	...	29·22	...	ಡಿಟೋ
3	...	25·28	..	ಇದರಪೈಕಿ 1·15 ತರಿ
4	...	10·1	...	ಖುಷ್ಕ
6	...	20·1	...	ಡಿಟೋ
7	...	32·38	...	ಡಿಟೋ
8	...	8·16	...	ಡಿಟೋ
9	...	5·28	...	ಡಿಟೋ
10	...	19·30	...	ಡಿಟೋ
11	...	20·27	...	ಡಿಟೋ
12	...	25·20	...	ಡಿಟೋ
15	...	6·3	...	ಡಿಟೋ
16	...	15·17	...	ಡಿಟೋ
17	...	12·20	...	ಡಿಟೋ
18	...	336·6	...	ಡಿಟೋ

ಸರ್ವೆ ನಂ.		ವಿಸ್ತೀರ್ಣ.		ತರಗತಿ. (ಗೋಮಾಳ)
19	...	5·37	...	ಡಿಟೋ
20	...	10·7	...	ಡಿಟೋ
21	...	12·15	...	ಡಿಟೋ
22	...	8·25	...	ಡಿಟೋ
23	...	14·11	...	ಡಿಟೋ
24	...	32·1	...	ಡಿಟೋ
25	...	15·15	...	ಡಿಟೋ
26	...	13·10	...	ಡಿಟೋ
28	...	16·15	...	ಡಿಟೋ
29	...	·26	...	ಡಿಟೋ

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು ಮಿ॥ ಸಿ. ವೆಂಕಟರಾವ್, ಬಿ.ಎ. ಯವರನ್ನು ಅಂಥಾ ಎಲ್ಲಿಗಳಲ್ಲಿ ಅಡಗಿರುವ ಜವಿಾನಿನಲ್ಲಿ ಅಥವಾ ಅದರಮೇಲೆ ಅಥವಾ ಅಂಥಾ ಜವಿಾನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ ಎರಡನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಾಗಿ, ಮೊಕರರ್ರಾಡಲೂ, ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟು ಸೆಟ್ಲಮೆಂಟ್ ಆಫಿಸರಿಗೆ ಸರ್ಕಾರ್ ತರಫು ಕುಮ್ಮಕ್ ಮಾಡಲು ಹಾಜರಾಗುವಂತೆ ಮೊಕರರ್ರಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು, ಫಾರೆಸ್ಟು ಸೆಟ್ಲಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫಿಸರಾಗಿ ಮೊಕರರ್ರಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 30ನೆ ಆಗಸ್ಟು 1909.

ನಂ. ರೆ. 1892—ಲ್ಯಾ. ರೆ. 101-09-2, ಕೋಲಾರದ ಡಿಸ್ಟ್ರಿಕ್ಟಿನ ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ ಮಿ॥ ಎ. ವೇದಾಂತದೇಶಿಗಂ ಅಯ್ಯಂಗಾರ್ರಿಗೆ 1909ನೆ ಜುಲೈ 26ನೆ ತಾರೀಖಿನಿಂದ 15 ದಿವಸಗಳ ಪ್ರಿವಿಲೇಜ್ ರಜಾ ಕೊಡಲಾಯಿತು.

2. ಮೇಲ್ಕಂಡ ರಜಾ ಕಾಲದಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ ಮಿ॥ ಎಸ್. ಶಾಮಣ್ಣ, ಬಿ.ಎ. ಯವರು ಸದರಿ ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿದ್ದರು.

ತಾರೀಖು 2ನೆ ಸೆಪ್ಟಂಬರ್ 1909.

ನಂ. ರೆ. 1934—ಲ್ಯಾ. ರೆ. 89-09-2, ರೆವಿನ್ಯೂ ಕಮಿಷನರವರ 1909ನೆ ಆಗಸ್ಟು 11ನೆಯ ಮರ್ಕುಂ 2005ನೆ ನಂಬರ್ ಇಸ್ತಿಹಾರ್ನಾಮೆಯನ್ನನುಸರಿಸಿ 15 ದಿವಸಗಳ ಪ್ರಿವಿಲೇಜ್ ರಜಾಮೇಲಿರುವ ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮಿ॥ ಪಿ. ಸುಬ್ಬರಾಯುಲು ನಾಯಿಡುಯವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಸಿರಸ್ತೆದಾರ್ ಕೆ. ಎಸ್. ರಾಮಚಂದ್ರಯ್ಯನವರನ್ನು ಸದರೀ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರ್ ಮತ್ತು 3ನೆ ತರಗತಿಯ ವೇಜಿಸ್ಟ್ರೇಟರನ್ನಾಗಿ ಮೊಕರರ್ರಾಡಿ ಇದೆ

ತಾರೀಖು 2ನೆ ಸೆಪ್ಟಂಬರ್ 1909.

ನಂ. ರೆ. 1945—ಲ್ಯಾ. ರೆ. 115-09-2, ಮೈಸೂರು ಸರ್ವಿಸ್ ರೆಗ್ಯುಲೇಷನ್ನಿನ 177ನೆ ಪ್ರಕರಣವನ್ನನುಸರಿಸಿ, ಆನೇಕಲ್ಲು ತಾಲ್ಲೂಕು ಅಮಲ್ದಾರ್ ಮಿ॥ ಸಿ. ಎಸ್. ಕುಪ್ಪಸ್ವಾಮಿ ಅಯ್ಯಂಗಾರ್ರವರಿಗೆ 1909ನೆ ಇಸವಿ ಸೆಪ್ಟಂಬರ್ ಗುರ್ರಿ ತಾರೀಖು ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ರಾಡಿ ಇರುತ್ತದೆ.

ಕಾಯಂ ಅಮಲ್ದಾರ್ರು ರಜಾದಮೇಲೆ ಗೈರ್ ಹಾಜರಾಗುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೇರಿಯಟ್‌ನಲ್ಲಿ 1ನೆಯ ದರ್ಜೆ ಕ್ಲರ್ಕ್ ಮಿ॥ ಎಸ್. ಮೂರ್ತಿರಾವ್, ಬಿ.ಎ. ಯವರನ್ನು ಆನೇಕಲ್ ತಾಲ್ಲೂಕು ಅಮಲ್ದಾರ್ ಮತ್ತು 3ನೆ ಕ್ಲಾಸ್ ವ್ಯೂಜಸ್ಟ್ರೇಟರನ್ನಾಗಿ ಹಂಗಾಮಿ ತರೀಕ್ ನೇಮಿಸಿ ಇರುತ್ತದೆ.

ತಾರೀಖು 7ನೆ ಸೆಪ್ಟಂಬರ್ 1909.

ನಂ. ಮಿಲಿಟರಿ 331-3—53-09-2, ಘನವನ್ನು ಹೊಂದಿದ ಮೈಸೂರು ಸೀಮೆಯ ಶ್ರೀಮರ್ ಮಹಾರಾಜರವರು ಮೈಸೂರು ಪೈದಲ್ ಮೊದಲನೆ ಪಟಾಲಂ 2ನೆ ಗ್ರೇಡ್ ಸುಬೇದ್ದಾರ್ ಕೇಶವನಾಯಕರನ್ನು ಅದೇ ಪಟಾಲಂನಲ್ಲಿ ಮೊದಲನೆ ಗ್ರೇಡ್ ಸುಬೇದಾರರಾಗಿ 1909ನೆ ಇಸವಿ ಜುಲೈ ತಿಂಗಳು 31ನೆ ತಾರೀಖು ಲಾಗಾಯಿತು ಬಡ್ತಿ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೇರಿ.